ಅಪರಂಜಿ

ಏಪ್ರಿಲ್ 99

ತಿಳಿನಗೆಯ ಕಾರಂಜಿ



ಪ್ರಕಾಶ್
ಶಿವಕುಮಾರ್
ವಿಜಯ ಸಚ್ಚಿದಾನಂದ
ನಾಚಿ
ಲೋಕನಾಥ ದೀಕ್ಷಿತ್
ನಕ್ಷತ್ರಿಕ
ಜಿ.ಎನ್.ಜಿ.
ನಾಡಾಡಿ
ಎನ್. ಪ್ರಭಾಕರ್
ಸಿ.ಆರ್. ಸತ್ಯ
ಎಂ.ಎನ್.ಕೆ.
ಸಂಧ್ಯಾ ರಮೇಶ್
ಎನ್. ಪ್ರಕಾಶ್
ಪ್ರಕಾಶ್
ಎನ್. ಪ್ರಕಾಶ್

ಬಿಡಿ ಪ್ರತಿ: ರೂ. 5.00



ಕೊರವಂಜಿಗೆ ಲಕ್ಷಣ್ ಬರೆದ ವ್ಯಂಗ ಚಿತ್ರ

ಶುಭಾಶಗಳೊಂದಿಗೆ

ವಿಜಯಾ ಮತ್ತು ಆನಂದ್ ದೇಸಾಯ್

ಆಸ್ಟಿನ್, ಟೆಕ್ಸಸ್



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್
ನಿರ್ವಹಣೆ:
ಬೇಲೂರು ರಾಮಮೂರ್ತಿ
ಕೃಷ್ಣ ಸುಬ್ಬರಾವ್

ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ: ರೂ. 60
ಹತ್ತು ವರ್ಷದ ಚಂದಾ : ರೂ. 500

ವಿಳಾಸ : ಅಪರಂಜಿ ಕಾರ್ಯಾಲಯ, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 16 ಏಪ್ರಿಲ್ 99 ಸಂಚಿಕೆ-7

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್, ಬೆಂಗಳೂರು 27



ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ 16 ಏಪ್ರಿಲ್ 99 ಸಂಚಿಕೆ-7

ಸೋಽಬಿಭೇತ್

- ಬೃಹದಾರಣ್ಯಕ

ಮೊದಲು ಇದು ಆತ್ಮನಾದ ಪ್ರಜಾಪತಿಯೇ ಆಗಿತ್ತು. ಅವನು ಭಯಪಟ್ಟನು.

ಆತ್ಮನಿಗೆ ಭಯವೆಂದರೇನು? ಆತನು ಒಬ್ಬನೇ ಅಲ್ಲವೇ ಎರಡನೆಯದೊಂದಿದ್ದರೆ ತಾನೇ ಭಯವೆನ್ನುವುದು (ಬರುತ್ತದೆ)?

ಸಾಮಾನ್ಯ ಪ್ರಜೆಗೂ ಭಯವಾಗುತ್ತದೆ. ಅವನ ಓಟನ್ನು ಕೇಳುವವನೇ ಎರಡನೆಯವನು ತಾನೇ?

ಓಟು ಸಿಕ್ಕಮೇಲೆ ಐದು ವರ್ಷಗಳಾಗುವತನಕ ಅವನಿಗೆ ಯಾವುದು ಲಂಗುಲಗಾಮು?

ದೇಶವೆಲ್ಲ ಘರ್ಷಣೆಯಿಂದ ತುಂಬುವಂತೆ ಮಾಡಿದರೂ, ಅವನನ್ನು ತಡೆಯುವವರಾರು? ಮುರಿಯುವವರಾರು? ಅವನಿಂದ ಆಗುವ ಅನ್ಯಾಯವನ್ನು ತಡೆಯುವವರಾರು? ಅವನಿಗೆ ಹಫ್ತಾ ಕೊಡುವುದಿಲ್ಲ ಎನ್ನುವ ಧೈರ್ಯ ಯಾರಿಗೆ?

ಶೋಷಿತರ, ದೀನರ ಹೆಸರಿನಲ್ಲಿ ಅವನು ಡೂಪರ್ ಬಂಡವಾಳಶಾಹಿಗೆ ಸೇರಿದರು ಅದನ್ನು ಸರಿಪಡಿಸುವವರಾರು?

ಕಾಳಿದಾಸನಾಗುವ ಮೊದಲು ಇದ್ದಂತೆ ತನ್ನ ದೇಶದ ಕೊಂಬೆಗೆ ಕೊಡಲಿ ಏಟು ಕೊಡುವುದನ್ನು ತಪ್ಪಿಸುವವರಾರು? ಕಾನೂನು ಆಡಳಿತತಾನೇ? ಕಾನೂನನ್ನು ಮಾಡುವವನು ಅವನೇ ತಾನೇ?

ಹೀಗೆಂದುಕೊಂಡ ಸಾಮಾನ್ಯ ಪ್ರಜೆಯು ದೇಶದಲ್ಲಿ ಆದದ್ದು, ಆಗುತ್ತಿರುವುದು, ಆಗಲಿರುವುದು ಇದಕ್ಕೆಲ್ಲ ತಾನು ಹೊಣೆಯಲ್ಲವೆಂದರಿತನು. ಅವರ ಪಾಪವೇನು? ಅವರಿಗೆ ಓಟುಕೊಟ್ಟವರ ಪಾಪತಾನೇ?

ಹೀಗೆಂದರಿತ ಅವನು ಸುಖವಾಗಿರುತ್ತಾನೆ. ಅಪರಂಜಿ ಆಗಾಗ ಊರಿಗೆ ಬರುವವಳಲ್ಲವೇ? ಕಾಡಿನಲ್ಲಿ ಓಟುಕೊಡು ಎಂದು ಕೇಳುವವರಾರು! ಅವಳು ಭಯಪಡುವುದಿಲ್ಲ.



○ ಪ್ರಕಾಶ್

ಖಾತೆ ಮರು ಹಂಚಿಕೆ; ಸಚಿವರ ತೀವ್ರ ಅಸಮಾಧಾನ

- ಸುದ್ದಿ

ಜನಸೇವೆಗೆ ಅಡ್ಡಿ ಬಂದರೆ ಸುಮ್ಮನೆ ಇರುತ್ತಾರೆಯೇ??

★★★

ಕನ್ನಡ ಬರದವರ ನೇಮಕ ಬೇಡ; ಕ.ಸಾ.ಪ. ಆಗ್ರಹ

- ಪತ್ರಿಕೆ

ಇದನ್ನ ಕನ್ನಡದಲ್ಲಿ ಬರೆಯಬಾರದು!!
ಬೇರೆಯವರಿಗೆ ಅರ್ಥವಾಗುಲ್ಲ!!

★★★

ರೈಲುಗಳಲ್ಲಿ ಸಿಗರೇಟ್, ಬೀಡಿ ಮಾರಾಟ ನಿಷೇಧ

- ಸುದ್ದಿ

ಸದ್ಯ, ಸೇದಲು ಬಿಡುತ್ತಾರೆ ತಾನೆ!!

★★★

ಕನ್ನಡ ಮರಕ್ಕೆ ಇಂಗ್ಲಿಷ್ ಕೀಟದ ಹಾವಳಿ

- ಶ್ರೀ ಪಟೇಲ್

'ಇಂಗ್ಲಿಷ್ ಗೀತೆಗಳು' ಯಾಕಾದರೂ ಬರೆದೆನೋ
ಎಂದು ಬಿ.ಎಂ.ಶ್ರೀ ಮರುಗಿದರಂತೆ

★★★

ಭವಿಷ್ಯದ ಹಿತ ರಕ್ಷಿಸುವ ಸಂಶೋಧನೆ ಕೈಗೊಳ್ಳಲು ವಿಜ್ಞಾನಿ ಕರೆ

- ಪತ್ರಿಕೆ

ಆದರೆ, ರಾಜಕಾರಣಿಗಳನ್ನು 'ವೈಜ್ಞಾನಿಕ'ವಾಗಿ ನೋಡುವುದು ಅಸಾಧ್ಯ!!

★★★

ಚಳವಳಿ ಪ್ರೇರಿತ ಸಾಹಿತ್ಯ ರಚನೆಯ ಬಗ್ಗೆ ಶ್ರೀ ಬೈರಪ್ಪನವರ ಆತಂಕ
- ಸುದ್ದಿ

ಈ ಬಗ್ಗೆ ಚಳವಳಿ ಅತ್ಯಗತ್ಯ!!

★★★

ಭಿನ್ನರನ್ನು ಜನ ವಿಚಾರಿಸಿಕೊಳ್ತಾರೆ
- ಶ್ರೀ ಪಟೇಲ್

ನಿಷ್ಠರನ್ನು ದೇವರೇ ವಿಚಾರಿಸಬೇಕೇನೋ??

★★★

ಧರ್ಮ ಭಾರತೀಯ ಬದುಕಿನ ಅವಿಭಾಜ್ಯ ಅಂಗ
- ಶ್ರೀ ಅದ್ವಾನಿ


ಹೌದು, ಅಧರ್ಮವೂ ಅಷ್ಟೆ!!

★★★

ಕೊಳೆಯಾದ, ವಿಕೃತ ನೋಟುಗಳ ಬದಲಾವಣೆ
- ಪತ್ರಿಕೆ

ಅವುಗಳ ಡಿನಾಮಿನೇಷನ್ ಕಂಡುಹಿಡಿಯೋದೇ ಕಷ್ಟ!!

★★★



"ನೋಡಿದ್ಯಾ, ನಮ್ಮಿಬ್ಬರ ಪ್ರೇಮಕ್ಕೆ ಇನ್ನೇನು ಸಾಕ್ಷಿ ಬೇಕು, ಇಬ್ಬರ post prandial blood sugar ಊ ಒಂದೇ ಇದೆ!"

ನಮ್ಮ ನಮ್ಮಲ್ಲಿ

ಪ್ರಮಾಥಿ ಸಂವತ್ಸರದ ಶುಭಾರಂಭದ ಈ ಸಮಯದಲ್ಲಿ ನಮ್ಮ ಲೇಖಕ, ಲೇಖಕಿಯರಿಗೆ, ಓದುರಿಗೆ ಹಾಗೂ ಎಲ್ಲ ಹಿತೈಷಿಗಳಿಗೆ ಅಪರಂಜಿಯ ತುಂಬು ಹೃದಯದ ಶುಭಾಶಯಗಳು. ಈ ಹೊಸವರುಷ ಸಕಲರಿಗೂ ಸನ್ಮಂಗಳವನ್ನುಂಟುಮಾಡಲೆಂದು ಅಪರಂಜಿ ಭಗವಂತನಲ್ಲಿ ಮಂಡಿಯೂರಿ ಪ್ರಾರ್ಥಿಸುತ್ತಾಳೆ. ಜನವರಿ ತಿಂಗಳ ಹಾಸ್ಯೋತ್ಸವ ವಿಶೇಷಾಂಕದಲ್ಲಿ ತಿಳಿಸಿದಂತೆ ನಮ್ಮ ವಿಶೇಷ ಸಂಚಿಕೆಯನ್ನು ಏಪ್ರಿಲ್ ಬದಲು ಜನವರಿ ತಿಂಗಳಿಗೆ ಹೊರತಂದು ಹಾಸ್ಯೋತ್ಸವದ ಸಂದರ್ಭದಲ್ಲಿ ಮಾರಾಟ ಮಾಡಿ ನಾಲ್ಕು ಕಾಸು ಸಂಪಾದಿಸಿ ಧಾರಳವಾಗಿ ಆಗುತ್ತಿರುವ ನಷ್ಟವನ್ನ ಸ್ವಲ್ಪಮಟ್ಟಿಗಾದರೂ ತುಂಬುವ ಮಹದಾಕಾಂಕ್ಷೆಯ ಈ ಹೆಜ್ಜೆಯನ್ನು ಓದುಗರೆಲ್ಲರೂ ಸ್ವಾಗತಿಸುವರೆಂಬ ಆಶೆ ನಮ್ಮದು.

ಕಳೆದ ಹಾಸ್ಯೋತ್ಸವದ ಸಮಯದಲ್ಲಿ ಅನೇಕ ಉತ್ಸಾಹೀ ತರುಣ, ತರುಣಿಯರ ಸಹಕಾರದಿಂದ ಹತ್ತಾರು ಆಜೀವ ಚಂದಾದಾರರು ನಮ್ಮ ಓದುಗ ಬಳಗವನ್ನು ಸೇರಿದರು. ಇವರುಗಳ ಚಂದಾ ಹಣವನ್ನು ಒಂದು ಠೇವಣಿಯಲ್ಲಿಟ್ಟು ಅದರ ಬಡ್ಡಿಯಿಂದ ವಾರ್ಷಿಕ ಚಂದಾ ಮೊಬಲಗನ್ನು ಹೊಂದಿಸುವ ಯೋಜನೆಯ ಮೇಲೆ ನಮ್ಮ ಛಾರ್ಟರ್ಡ್ ಅಕೌಂಟೆಂಟರ ಕಾಕದೃಷ್ಟಿ ಬಿದ್ದು ಯೋಜನೆ ಸ್ಟಿಲ್ ಬಾರ್ನ್ ಆಯಿತು. ಅವರ ಪ್ರಕಾರ ಆಜೀವ ಚಂದಾ ಎಂದು ಹಣ ಸಂಗ್ರಹಣೆ ಮಾಡಿದರೆ ಚಂದಾ ಇಷ್ಟು ವರ್ಷಗಳಿಗೆ ಎಂದು ಖಚಿತವಾಗಿ ನಮೂದಿಸಿಲ್ಲದ ಪ್ರಯುಕ್ತ ಅದರ ಪೂರ್ತಿ ಮೊಬಲಗನ್ನು ಅದೇ ವರ್ಷದ ಆದಾಯ ಎಂದು ತೋರಿಸಬೇಕಂತೆ. ಮುಂದಿನ ವರ್ಷದಿಂದ ಆಜೀವ ಚಂದಾ ಎನ್ನುವ ಬದಲು ಹತ್ತು ವರ್ಷದ ಚಂದಾ ಎನ್ನಿ. ಚಂದಾ ಮೊಬಲಗನ್ನು ಹತ್ತು ವಷಗಳಿಗೆ ಹರಡಲಾದೀತು ಎಂದರು. ಸರಿ, ಅಜ್ಜಿ ನೂತದ್ದೆಲ್ಲಾ ಅಜ್ಜನ ಉಡುದಾರಕ್ಕೆ ಅಂದಹಾಗೆ, ಹಾಲೀ ವರ್ಷದ ಇಲ್ಲದ ವರಮಾನಕ್ಕೆ ತೆರಿಗೆ ಬೇರೇ ಕೊಟ್ಟು ಕೂತಿದ್ದೇವೆ. ಈ ಸಂಚಿಕೆಯಿಂದ ಆಜೀವ ಚಂದಾ ಎನ್ನುವ ಬದಲು ಹತ್ತು ವರ್ಷದ ಚಂದಾ ಎಂದು ನಮ್ಮ ಚಂದಾ ಸಂಗ್ರಹಣೆ ನಡೆಯುತ್ತದೆ. ನಿಮ್ಮ ಸಹಕಾರ ಎಂದಿನಂತಿರಲಿ.

ಮೊನ್ನೆ ಸೋಮವಾರ ಸಂಜೆ ಟಿವಿಯಲ್ಲಿ ಆಸ್ಕರ್ ಸಮಾರಂಭದ ವಿಶೇಷ ವರದಿಯನ್ನು ನೋಡುತ್ತಿದ್ದಾಗ ''ನೆನಹು ಬಾಳಿನ ಬುತ್ತಿ, ಅನುಭವಗಳ ಅಕ್ಷಯ ನಿಧಿ'' ಎಂಬ ಕವಿವಾಣಿ ಎಷ್ಟು ನಿಜ ಅನ್ನಿಸಿತು. ವರ್ಷದ ಉತ್ತಮ ನಟ ಪ್ರಶಸ್ತಿ ಪಡೆದ ರೊಬೆರ್ತೋ ಬೆನೀನಿಗೆ ಆಸ್ಕರ್ ಪ್ರಶಸ್ತಿ ನೀಡಲು ಸೋಫೀಯಾ ಲೊರೇನ್ ವೇದಿಕೆಯ ಮೇಲೆ ನಡೆದು ಬರುತ್ತಿದ್ದಾಗ ಆಕೆ ನಟಿಸಿದ್ದ ''ತ್ರೀ ಕಾಂಯ್ನ್ಸ್ ಇನ್ ಎ ಫೌಂಟನ್'', ''ಬಾಯ್ ಆನ್ ಎ ಡಾಲ್ಫಿನ್'', ಮುಂತಾದ ಅನೇಕ ಅವಿಸ್ಮರಣೀಯ ಚಿತ್ರಗಳು ನೆನಪಿಗೆ ಬಂದವು. ಅರವತ್ತನ್ನು ದಾಟಿದ

ಸೋಫೀಯಾಳ ಮುಖದಲ್ಲಿ ಸಹಜವಾಗಿಯೇ ಮೂಡಿದ್ದ ವೃದ್ಧಾಪ್ಯದ ಗೆರೆಗಳು, ತಾರುಣ್ಯದಲ್ಲಿ ತುಂಬಿಕೊಂಡಿದ್ದ ಮುಖ ಈಗ ತೆಳುವಾಗಿದ್ದಿದ್ದರಿಂದಲೋ ಏನೋ, ಅರಳಿದಂತೆ ಕಾಣುತ್ತಿದ್ದ ಕಣ್ಣುಗಳು, ಇವುಗಳನ್ನು ನೋಡಿದಾಗ ಒಂದು ಕ್ಷಣ ಹತಾಶಭಾವನೆಯೊಂದು ಮನದಲ್ಲಿ, ಅಲ್ಲ, ಅಲ್ಲ ಹೃದಯದಲ್ಲಿ ಸುಳಿದುಹೋಯಿತು. ಉತ್ತಮ ನಟ ಪ್ರಶಸ್ತಿಗೆ ಅರ್ಹರಾದವರ ನಾಲ್ಕಾರು ಹೆಸರುಗಳನ್ನು ಹೆಸರಿಸಿ ಕೊನೆಗೆ ಸೋಫಿಯಾ ತನ್ನ ಕೈಲಿದ್ದ ಲಕ್ಕೋಟೆಯ ಕೆಂಪು ರಿಬ್ಬನನ್ನು ಕಿತ್ತು, ಒಳಗಿನ ಕಾಗದವನ್ನು ತೆಗೆದು, Smile of the year ಎನ್ನಬಹುದಾದ, ಕ್ರಮೇಣ ಮುಖವನ್ನೆಲ್ಲಾ ಆವರಿಸಿದ, ಬೃಹತ್ ಮೆಲುನಗೆಯೊಂದಿಗೆ ''ರೊಬೆರ್ತೋ'' ಎಂದು ಘೋಷಿಸಿದಾಗ, ನಾಲ್ಕು ದಶಕಗಳ ಅಂತರ ಮಾಯವಾಗಿ ನನ್ನ ನೆನಪಿನ ಸೋಫಿಯಾ ವೇದಿಕೆಯ ಮೇಲೆ ಪ್ರತ್ಯಕ್ಷಳಾದದ್ದನ್ನು ನಾನು ಬೇಗ ಮರೆಯುವಂತಿಲ್ಲ.

ಉತ್ತಮ ಸಹಾಯಕ ನಟ ಪ್ರಶಸ್ತಿ ಈ ಬಾರಿ ಜೇಮ್ಸ್ ಕೋಬರ್ನ್‌ಗೆ ದೊರಕಿತು. ಈ ಜೇಮ್ಸ್ ಅನೇಕ ವೆಸ್ಟರ್ನ್ ಚಿತ್ರಗಳಲ್ಲಿ ಬಹು ಸಮರ್ಪಕವಾಗಿ ನಟಿಸಿ ಖ್ಯಾತನಾಮವಾಗಿದ್ದಾನೆ. ''ದ ಸೆವೆನ್ ಸಮುರಾಯ್'' ಎಂಬ ಜಪಾನೀ ಚಿತ್ರವನ್ನಾಧರಿಸಿ ನಿರ್ಮಿಸಿದ ''ದ ಮ್ಯಾಗ್ನಿಫಿಸೆಂಟ್ ಸೆವೆನ್'' ಚಿತ್ರದಲ್ಲಿ ಜೇಮ್ಸ್‌ನ ಪಾತ್ರ ಮರೆಯಲಾಗದ್ದು. ಚಾಕು ಎಸೆಯುವ ಕಲೆಯಲ್ಲಿ ನಿಷ್ಣಾತನಾಗಿದ್ದ ಪಾತ್ರವನ್ನು ವಹಿಸಿದ್ದ ಜೇಮ್ಸ್ ಈ ಚಿತ್ರದಲ್ಲಿ ತೋರುವ ಗಾಂಭೀರ್ಯ, ತೀಕ್ಷ್ಣ ಕಸುಬುಗಾರಿಕೆ ಇವೆಲ್ಲವನ್ನೂ ಆ ಆಸ್ಕರ್ ಸಮಾರಂಭವನ್ನು ನೋಡುವಾಗ ನೆನೆಯುವಂತಾಯಿತು.

ಭಾರತ, ಅಮೆರಿಕಾಗಳ ಬಾಂಧವ್ಯ ಹೇಗೇ ಇರಲಿ, ಐವತ್ತು, ಅರುವತ್ತರ ದಶಕಗಳಲ್ಲಿ ನನ್ನ ತಲೆಮಾರಿನವರು ಈ ಹಾಲೀವುಡ್ ಚಿತ್ರಗಳೊಂದಿಗೆ, ನಟನಟಿಯರೊಂದಿಗೆ, ಬೆಳೆಸಿಕೊಂಡ ನಂಟು, ಕುವೆಂಪು ಹೇಳಿದಹಾಗೆ ನಿಜಕ್ಕೂ ''ಬಾಳಿನ ಬುತ್ತಿ''.

ಮಾರ್ಚ್ ಸಂಚಿಕೆಯಲ್ಲಿನ ಲೇಖನಗಳನ್ನು ಕುರಿತು ಅನೇಕ ಓದುಗರು ಪತ್ರಗಳನ್ನು ಬರೆದಿದ್ದಾರೆ. ಉಡುಪಿಯ ನಾಗೇಶ್‌ರವರು ''ಕಟ್ಟೆ ಪುರಾಣ''ವನ್ನು ಮೆಚ್ಚಿ 'ಹಾಸ್ಯವೆಂದರೆ ಹೀಗಿರಬೇಕು' ಎಂದು ಬರೆದರೆ, ನಮ್ಮ ಬಳಗದ ಶೀನೂರವರು ಈ ಲೇಖನಕ್ಕೆ A+ ರೇಟಿಂಗ್ ಕೊಟ್ಟಿದ್ದಾರೆ. ಹಾಗೆಯೇ 'ಗುಂಡೂರಾನಾರ ಸೊಸೆ ಸೋತಿದ್ದಾಳೆ. ಇದೊಂದು ಸಂಚಿ ಹೊನ್ನಮ್ಮ, ಹೆಳವನ ಕಟ್ಟೆ ಗಿರಿಯಮ್ಮ, ಅಥವಾ ಹರಪನ ಹಳ್ಳಿ ಭೀಮವ್ವ ಬರೆದ ನೀತಿ ಕತೆಯಂತಿದೆ' ಎನ್ನುತ್ತಾರೆ ಶೀನೂ. ನೀವೂ ಸಹ ನಿಮ್ಮ ಅನಿಸಿಕೆಗಳನ್ನು ಮುಕ್ತವಾಗಿ ತಿಳಿಸಿ. ಮುಕ್ತತೆ ಇಲ್ಲದಿದ್ದರೆ ಬಳಗ ಹೇಗಾದೀತು ಅಲ್ಲವೇ.

– ಶಿವಕುಮಾರ್

ಏಂಜಲ್ಲು ಬೂದುಮಾಮಿ ಭಾವಯ್ಯ

– ವಿಜಯ ಸಚ್ಚಿದಾನಂದ

ಏಂಜಲ್ಲು ಬೂದುಮಾಮಿ ಅಂದ್ರೆ ಆ ಕಂದನ ಭಾಷೆಯಲ್ಲಿ ಪೆನ್ಸಿಲ್ಲು ಮತ್ತು ಬಾದಾಮಿಯಂತೆ. ಆ ಕಂದ ಆಗ ಕೇವಲ ನಾಲ್ಕು ವರ್ಷದ ಹಸುಳೆ. ಅದೇ ತಾನೇ ತನ್ನ ಅಕ್ಕನ ಮದುವೆಯಲ್ಲಿ ಭಾಗಿಯಾಗಿದ್ದ ಅವನಿಗೆ ಈ ಹೊಸ ಭಾವನನ್ನು ಕಂಡ್ರೆ ಅತಿ ಅಕ್ಕರೆಯಂತೆ.

(ಇದೇನು ಈಗಿನ ಕಾಲದ ಕಥೆಯಲ್ಲವಲ್ಲ! ಒಂದಾನೊಂದು ಕಾಲದ ಕಥೆಯಿದು. ಈ ದಂಪತಿಗಳು ಈಗ ಬದುಕಿರುತ್ತಿದ್ದರೆ ನೂರಕ್ಕೂ ಮೇಲಾಗಿರುತ್ತಿದ್ದರೇನೋ!) ಅಕ್ಕನ ವಯಸ್ಸು ಅವಳ ಮದುವೆಯಲ್ಲಿ ಹನ್ನೊಂದೋ ಹನ್ನರಡೋ ಇರಬಹುದಾದರೆ ಭಾವ ಹರೆಯದ ಹೊಸ್ತಿಲಲ್ಲಿ ಕಾಲಿಟ್ಟಿದ್ದ. ವಯಸ್ಸು ಹತ್ತೊಂಬತ್ತರ ಹತ್ತಿರ. ಮೇಲಾಗಿ ಇಂಗ್ಲಿಷ್ ಅರಿತಿದ್ದ ವ್ಯಕ್ತಿ. ಮದ್ರಾಸಿನ ಗಿಂಡಿ ಕಾಲೇಜಿನ ವಿದ್ಯಾರ್ಥಿ. ಇಂಗ್ಲಿಷ್ ಭಾಷೆಯೆಂದರೆ ಅಚ್ಚುಮೆಚ್ಚು. ಅದರಲ್ಲೂ ಕೀಟ್ಸ್, ಶೆಲ್ಲಿ, ವರ್ಡ್ಸ್‌ವರ್ತ್ ಪದ್ಯಗಳೆಂದರೆ ಬಲು ಪ್ರೀತಿ. ಗಂಟೆಗಟ್ಲೆ ಓದುತ್ತಾ ಪ್ರಪಂಚವನ್ನೇ ಮರೆತು ಕುಳಿತುಬಿಡುವ. ಓದುತ್ತಾ ಕನಸುಗಳನ್ನು ಹೆಣೆದಿದ್ದೂ ಹೆಣೆದಿದ್ದೇ! ಈಗಿನ ಕಾಲದವರು TDH (tall, dark and handsome?) ಎಂದು ಕರೆಯಬಹುದಾದ ಆತನ ಮದುವೆಯಾಗಿದ್ದೂ ಒಂದು ವಿಚಿತ್ರವೇ! (ಹಿಂದಿನ ಅಂದ್ರೆ, 1994ರ ಯುಗಾದಿ ಸಂಚಿಕೆಯಲ್ಲಿ "ಅಕಾಲ ಒಂದಿತ್ತು ದಿವ್ಯತಾನಾಗಿತ್ತು" ಎನ್ನುವ ಲೇಖನದಲ್ಲಿ ಆತನ ಬಗ್ಗೆ ವರ್ಣಿಸಿಯಾಗಿದೆ. ಅದನ್ನು ಜ್ಞಾಪಕದಲ್ಲಿಟ್ಟುಕೊಂಡವರು ದಯವಿಟ್ಟು ಈ ಭಾಗವನ್ನು ಬಿಟ್ಟುಬಿಡಬಹುದು)

ಮದ್ರಾಸಿನಿಂದ ಬೇಸಿಗೆ ರಜಕ್ಕೆಂದು ತನ್ನೂರಿಗೆ ಬಂದಿದ್ದಾನೆ. ತನ್ನ ಪ್ರತಿಭೆಯನ್ನು ಎಲ್ಲರ ಮುಂದೂ ಕೊಚ್ಚಿಕೊಳ್ಳುವ ಹಂಬಲ. ಇಂಗ್ಲೀಷ್ ಭಾಷೆಯ ಗಂಧವೂ ಇಲ್ಲದ ತಂದೆ, ತಾಯಿ ಅಜ್ಜಿ, ತಮ್ಮ ಎಲ್ಲರನ್ನೂ ಕಲೆ ಹಾಕಿಕೊಂಡಿದ್ದಾನೆ. ಅವರ ಮುಂದೆ ತನ್ನ ಪಠ್ಯ ಪುಸ್ತಕಗಳನ್ನೆಲ್ಲಾ ಹರಡಿಕೊಂಡು ರಾಗ ರಾಗವಾಗಿ ಪದ್ಯಗಳನ್ನೆಲ್ಲಾ ಹೇಳುತ್ತಾಯಿದ್ದಾನೆ. ಅದನ್ನು ಕೇಳಿ ಅಜ್ಜಿ ತನ್ನ ಬೊಚ್ಚು ಬಾಯಿ ಅಗಲಿಸಿ "ಅಯ್ಯೋ! ಮಗು ಎಷ್ಟು ಚೆನ್ನಾಗಿ ಏನೇನೋ ಹೇಳುತ್ತೆ! ಇದ್ರ ಹಣೆ ಮೇಲೆ ಬಾಶಿಂಗ ಕಟ್ಟಿದ್ದನ್ನ ನೋಡಿ ಮರಿ ಮಗನ್ನಾಡ್ಸಿಬಿಟ್ರೆ ಆ ಶಿವನ ಪಾದಾರವಿಂದಾನ ನಗ್ತಾ ನಗ್ತಾ ಸೇರ್ಬಿಟ್ಟೇನು!" ಅಂತ ಕಣ್ಣಲ್ಲಿ ನೀರ್ಹಾಕಿ ನೀವಾಳ ತೆಗ್ದು ಪಟಪಟಾಂತ ನೆಟ್ಗೆ ತೆಗೀತಂತೆ.

ಅದನ್ನ ಕೇಳಿ ಒಳ್ಗೆ ಅಡ್ಗೇಮನೇಲಿ ಕೆಲ್ಸ ಮಾಡ್ತಾಯಿದ್ದ ಅವ್ರಮ್ಮ ''ಮದ್ವೇಂತೆ ಮದ್ವೇ! ಇನ್ನೂ ಕಣ್ಬಿಡೋಕ್ಕಿಲ್ಲ ಮದ್ವೆ ಕನಸು. ಅದೇನು ನಮ್ಮ ಕಾಲಾನೇ ಕಣ್ಬಿಡೋದಕ್ಕೆ ಮೊದ್ಲೇ ಮದುವೆ ಮಾಡಿ ಕೂರ್ಸ್ಲೋದಕ್ಕೆ. ಏನೋ ಓದಿ ಚೆನ್ನಾಗಿ ಸಂಪಾದ್ಸಿ ಸುಖದ ಸುಪ್ಪತ್ತಿಗೇಲಿ ನಮ್ಮನ್ನೆಲ್ಲಾ ಮಲಗಿಸ್ತಾನೇಂತ ಅಂದ್ಕೊಂಡ್ರೆ ಈ ಮುದ್ಕಿ ಆಸೆ ನೋಡು! ಅಂತ ಪಾತ್ರೆಗಳನ್ನ ಪಟ ಪಟ ಕುಟ್ಟಿದಳಂತೆ.

''ಹಾಳಾದೋನೇ! ಏನೋ ಅಚ್ಚುಕಟ್ಟಾಗಿ ಸಂಸ್ಕೃತದಲ್ಲಿ ಬಾಯ್ತುಂಬ ಶ್ಲೋಕಗಳನ್ನ ಹೇಳ್ತಾನೇಂತ ಅಂದ್ಕೊಂಡ್ರೆ ಅರ್ಥವಿಲ್ಲದ ಭಾಷೆಯಲ್ಲಿ ಏನೇನೋ ಬಡ್ಕೊಬೇಡ್ವೋ!'' ಅಂತ ಅಪ್ಪಾಜಿ ಅಂಬೋಣವೇ!

''ಥೂ! hopeless people! ಸ್ವಲ್ಪಾನೂ ನಾಗರೀಕತೆಯ ಗಂಧ ಅನ್ನೋದೇ ಇಲ್ಲ ಇವರಿಗೆ!'' ಅಂತ ಅಲ್ಲಿಂದ ತನ್ನ ಪುಸ್ತಕದ ಹೊರೆಯನ್ನೆಲ್ಲಾ ಹೊತ್ಕೊಂಡು ಅಲೆಮಾರಿಯಂತೆ ಅಲೀತಿದ್ದಾಗ ಒಂದು ಶಾಂತಮಯವಾದ ಪಾರ್ಕು ಕಂಡಿತಂತೆ. ಅಲ್ಲೇ ಒಂದು ದೊಡ್ಡ ಮರದ ಕೆಳಗೆ ಕೂತುಕೊಂಡು ಪದ್ಯ ಓದಲು ಶುರು ಹಚ್ಚಿದನಂತೆ. ಆಗಲೇ ಅವನಿಗೆ ಅಲ್ಲಿ ತನ್ನ ಕನಸಿಗೆ ಕನ್ಯೆ ಕಂಡಿದ್ದು. ಚೆಳತುಂಬು (ಜುಂಕಿ) ಹಾಕ್ಕೊಂಡು, ಪುಟ್ಟ ಕಿರಗೆ ಸೀರೆ ಉಟ್ಕೊಂಡು, ತೆಳೂನಡೂಗೆ ಡಾಬು ಬೇರೆ ಹಾಕ್ಕೊಂಡು ಅಲ್ಲೇ ಕುಂಟೇ ಬಿಲ್ಲೆ ಆಡ್ತಿದ್ಲಂತೆ. ಅವಳ ಸೊಂಟದ ಮೇಲೆ ಗುಂಡ ಗುಂಡಗೆ ಮಿತಿಮೀರಿ ಬೆಳೆದ ಸುಮಾರು ನಾಲ್ಕು ವರ್ಷವಿರಬಹುದಾದ ಹುಡುಗ. ಅವಳ ತಮ್ಮ ಅವ್ನು ಅಂತ ತಿಳ್ಕೊಬೇಕಾದ್ರೆ ಇವನೇನು ಹೆಚ್ಚಿಗೆ ಪತ್ತೇದಾರಿ ಮಾಡ್ಬೇಕಾಗ್ಲಿಲ್ವಂತೆ. ನಿಮಿಷ ನಿಮಿಷಕ್ಕೂ ''ಅಕ್ಕಾ! ಅಕ್ಕಾ!'' ಅಂತ ಅವ್ಳ ಗುಂಗುರು ಗುಂಗುರು ಮೊಟಕು ಮೋಟು ಜಡೆ ಎಳೀತಾಯಿದ್ದಾಗ್ಲೇ ಅವನು ತಮ್ಮಾಂತ ಹೊಳ್ದೇಹೋಯ್ತಂತೆ. ಆ ಹುಡುಗನ ಮೇಲೆ ಒಂದು ತರಹ ಅವನಿಗೆ ಅರಿವಿಲ್ಲದಂತೆ ಕೋಪ ಬೇರೆ ಬಂತಂತೆ. ""Idiot! ಅಕ್ಕ ಅಂದ್ರೇನೂ ಸಾಮಾನ್ಯನೇ! ಅಷ್ಟೊಂದು ಅವಳ ಪ್ರಾಣ ಹಿಂಡ್ತೀಯಲ್ಲಾ! ನೀನು ನನ್ನ ಕೈಗೆ ಸಿಕ್ಹಾಕೋ ಆಗೇನ್ಮಾಡ್ತೀನೀ ನೋಡು!'' ಅಂತ ಗೊಣಗಿಕೊಂಡು ಹಲ್ಲು ಬೇರೆ ಕಡೆದುಬಿಟ್ನಂತೆ. ಆಗ್ಲೇ ಅವನ ಒಳ ಮನಸ್ಸಿಗೆ ಗೊತ್ತಾಗ್ಹೋಯ್ತು - ಅವಳು ತನ್ನ ಮನಸ್ಸನ್ನ ಗೆದ್ದುಬಿಟ್ಟಿದ್ದಾಳೇಂತ.

ನಿಂತಲ್ಲಿ ಕೂತಲ್ಲಿ ಅವಳದೇ ಧ್ಯಾನ. ಯಾರಲ್ಲಿ ಹೇಳ್ಕೋಬೇಕು ತನ್ನ ಸಂಕಟಾನ! ಅಮ್ಮನ ಹತ್ರನೇ! ನೀವೇ ನೋಡಿದ್ರಲ್ಲಾ ಅವಳ ಗೊಣಗಾಟಾನ ಅಜ್ಜಿ ಅವ್ನ ಮದ್ವೆ ವಿಷ್ಯ ಎತ್ತಿದಾಗ! ಎಂಥ ಸಂದಿಗ್ಧ ಪರಿಸ್ಥಿತಿ! ಆಗ್ಲೇ ಸಹಾಯಕ್ಕೆ ದೇವ್ರ ಹಾಗೇ ಬಂದಿದ್ದು ಅವರ ಮನೆ ಕುಲ ಪುರೋಹಿತರು. ಅದೇನು ಕಮ್ಮಿನೇ ಅವ್ರಿಗೆ ಕೊಟ್ಟ ಲಂಚ! ಇವ್ನ ಸ್ಕಾಲರ್‌ಷಿಪ್‌ಗೆ ಬಂದ ಹಣವನ್ನೆಲ್ಲಾ

ಲಪಟಾಯಿಸಿಕೊಂಡು ಬಿಟ್ಟಿದ್ದ ಆ ಘಾಟಿ ಮುದ್ಕ - ಪುರೋಹಿತ. ಅಂತೂ ಇಂತೂ ಕುಂಡಲಿ ಬರ್ದು ಕವಡೆ ಎಸ್ದು ಗುಣಾಕಾರ ಭಾಗಾಕಾರ ಮಾಡಿ ಇಂತಹ ಹುಡ್ಗೀನ ಮದ್ವೆ ಮಾಡ್ಸಿ ಸೊಸೆಯಾಗಿ ತಂದ್ರೆ ಇವನ ರೋಗಕ್ಕೆ ಸಿದ್ಧೌಷಧಿ ಅಂತ ಹೇಳಿ ಮನೆಯೋರನ್ನೆಲ್ಲಾ ಒಪ್ಸಿರಲಿಲ್ಲವೇ! ನಮ್ಮ ನಾಯಕ ಏನು ಕಮ್ಮಿ! ಎಂಥ ಚೆನ್ನಾಗಿ ನಾಟಕ ಮಾಡಿದ್ದ ತನಗೆ ಖಾಯಿಲೆ ಅಂತ! (ಪುನಃ ಹೆಚ್ಚಿನ ವಿವರಗಳಿಗೆ ಹಿಂದೆ ಹೇಳಿದ ''ಆ ಕಾಲ ಬಂದಿತ್ತು ದಿವ್ಸ ತಾನಾಗಿತ್ತು'' ಓದಬಹುದು)

ಅದೆಲ್ಲಾ ಮರೆತು ಹೋದ ಕಥೆಯಂತಾಗಿದೆ! ನಮ್ಮ ನಾಯಕನಿಗೆ ಅವನ ನಾಯಕಿ ಸಿಕ್ಕೇ ಬಿಟ್ಟಿದ್ದಾಳೆ! ಅಂದ್ರೆ ಅರ್ಥವಾಯ್ತಿಲ್ಲ. ಅವನಿಗೆ ಮದ್ವೇ ಆಗೇ ಹೋಗಿದೆ. ಆದ್ರೂ ಏನೋ ಒಂದು ತರಹ ಕೊರತೆ ಅವನಿಗೆ. ಯಾಕಂದ್ರೆ ಈಗಿನ ಕಾಲದ ತರಹ ತಕ್ಷಣ ಹುಡ್ಗಿ ಮನೇಗೆ ಬಂದ್ಬಿಡೋಲ್ಲವಲ್ಲಾ. ಹಲವಾರು ವರ್ಷಗಳು ಕಾಯ್ಲೇ ಬೇಕಲ್ಲಾ! ಕಣ್ಣಿನ ತುಂಬಾ ಕನಸನ್ನು ಹೊತ್ತ ಯುವಕನಿಗೆ ಅವಳೊಂದಿಗೆ ಏನೇನೋ ಮಾತಾಡ್ಬೇಕು ಅನ್ನೊ ಆಸೆ! ಇಂಗ್ಲೀಷ್ ಪುಸ್ತಕಗಳನ್ನೆಲ್ಲಾ ಓದಿ ಏನೇನೋ ತಿಳ್ಕೊಂಡಿದ್ದನಲ್ಲಾ! ಅವನಮ್ಮನ ಕಣ್ಣು ತಪ್ಪಿಸಿ ಏನೇನೋ ನೆಪ ಮಾಡ್ಕೊಂಡು ಅವಳ ಮನೇಗೆ ಹೋಗೋನು. ಅವ್ಳು ಇವನನ್ನ ಕಾಣ್ತಿದ್ದ ಹಾಗೆ ಎಲ್ಲೋ ಒಳಗ್ಹೋಗಿ ಸೇರ್ಕೊಂಡು ಬಿಡೋಳಂತೆ!

ಇವ್ನು ಎಷ್ಟೋ ಹೊತ್ತು ಹಾಗೇ ಕಾಯ್ತಾ ಕೂತಿರೋನಂತೆ! ಆಮೇಲೆ ತಾಯಿ ಮಗಳ ಗುಸುಗುಸು ಕೇಳ್ಸೋದಂತೆ! ಕೊನೆಗೆ ಹೊರಗೆ ಬರೋಳಂತೆ! ಅದೂ ಹೇಗೆ ಬರೋಳು ಅಂತೀರೀ? ಎಡಗಡೆ ಸೊಂಟದ ಮೇಲೆ ಆ ಕೊಂಟೆಕೋಣ - ಅವಳ ತಮ್ಮನ್ನ ಹೊತ್ಕೊಂಡು ಬಲಗೈಲಿ ಲೋಟದ ಭರ್ತಿ ಬಿಸಿ ಬಿಸಿ ಹೊಗೆ ಆಡ್ತಿರೋ ಕಾಫಿ ಹಿಡಿದು ಬರೋಳು. ಕಾಫೀನ ಇವನ ಮುಂದೆ ಕುಕ್ಕಿ ತಮ್ಮನ್ನ ಹೊತ್ಕೊಂಡು ಓಡಿ ಹೋಗ್ಬಿಡೋಳಂತೆ! ಗೊತ್ತಿದೆಯಲ್ಲಾ - ಆ ಕೋಣನ್ನ ಹೊತ್ಕೊಂಡು ಎದುರು ಮನೆ ಹುಡ್ಗಿ ಜೊತೆ ಕುಂಟೆಬಿಲ್ಲೆ! ಆ ಭಾರ ಹೊರೋದು ನೋಡದ್ರೆ ಇವನಿಗೆ 'ಅಯ್ಯೋ' ಅನ್ಸೋದು. ಆ ಭಾರನ ತದ್ಕಾಕಿಬಿಡೋಷ್ಟು ಕೋಪ ಬರೋದು. ಹಾಗೇ ನಗುಮುಖದ ಮುಖವಾಡ ಹಾಕ್ಕೊಂಡು ಮಾವನವರೊಂದಿಗೆ ಲೋಕಾಭಿರಾಮದ ಮಾತಾಡಿ ಬಿಸಿ ಬಿಸಿ ಕಾಫಿ ಕುಡ್ದು ಮನೇಗೆ ವಾಪಸ್ಸಾಗೋನು! ಇಂಗ್ಲೀಷ್ ಪುಸ್ತಕಗಳಲ್ಲಿ ಓದಿದ್ದ ರಸಿಕ ಪದಗಳೆಲ್ಲಾ ವ್ಯರ್ಥ! ಅವಳನ್ನ ಎಷ್ಟು ವಿಧಗಳಲ್ಲಿ ಪ್ರೀತಿಯಿಂದ ಮಾತಾಡ್ಸಬೇಕೂಂತ ಕನಸು ಹೆಣದಿದ್ದನೋ ಅದೆಲ್ಲಾ ಹಾಳು!

ಒಂದ್ಸಲತಿ ಸಿಕ್ಕೇ ಬಿಡ್ತು chance! ಅವ್ಳು ಕಾಫಿ ಇಟ್ಟಾಗ ತಕ್ಷಣ ಅವಳ ಕೈ ಹಿಡಿದು ''ನಾನು ನಿನ್ನ ತುಂಬಾ ಪ್ರೀತಸ್ತೀನಿ! ನೀನೂ ನನ್ನ ಪ್ರೀತಿಸ್ತೀಯಾ?'' ಅಂತ ಕೇಳೇ

ಬಿಟ್ನಂತೆ. ಅವ್ಳು ನಾಚಿ ನೀರಾಗಿ ಕೈ ಎಳೆದುಕೊಳ್ಳೋದಕ್ಕೆ ಪ್ರಯತ್ನಿಸಿ ವಿಫಲಳಾಗಿ ಕೊನೆಗೆ ಕಣ್ಣಲ್ಲಿ ನೀರ್ಬಾಕೊಂಡಾಗ ಕೈ ಬಿಟ್ನಂತೆ. ''ಅಮ್ಮಾ! ಅಕ್ಕನ್ನ ಭಾವ ಅಳಸ್ತಾಯಿದಾರೆ!'' ಅಂತ ಆ ಸೊಂಟದ ಭಾರ ಬೊಬ್ಬೆ ಹಾಕೊಂಡಾಗ ಯಾರ್ಗೂ ಹೇಳ್ದೇ ಕೇಳ್ದೇ ಅಲ್ಲಿಂದ ಕಂಬಿ ಕಿತ್ತಿದ್ನಂತೆ.

ಆ ಮಗೂನೋ ಹಾಳಾದ್ದು! ಒಳ್ಳೆ ಮಾತು ಕಲಿಯೋ ವಯಸ್ಸು! ಪಟ ಪಟಾಂತ ಅರಳು ಹುರಿದ ಹಾಗೇ ಅದ್ರ ಮಾತು. ಯಾರು ಏನ್ಹೇಳಿದ್ರೂ ಗಿಣಿ ತರಹ ತಿರುಗಿ ತಕ್ಷಣ ಒಪ್ಸೋದಂತೆ. ಸರಿ! ಇನ್ನು ಭಾವ ತನ್ನಕ್ಕನ್ನ ''ನೀನು ನನ್ನ ಪ್ರೀತಿಸ್ತೀಯಾಂತ ಕೇಳಿದ್ದನ್ನ ಬಿಡುತ್ಯೆ? ಬಂದೋರ ಮುಂದೆಲ್ಲಾ ಹೇಳೋದಂತೆ, ಅವ್ಳು ಅದಕ್ಕೇಂತ ಇವನ ಮುಂದೇ ಸುಳ್ಯೋದೇ ಬಿಟ್ಬಿಟ್ಟಿದ್ಲು. ಅತ್ತೆಗೂ ಕೋಪ ಬಂದಿತ್ತೋ ಏನೋ ಇವನು ಹೋದಾಗೆಲ್ಲಾ ದುಮದುಮಾಂತ ಮುಖ ಹಾಕ್ಕೊಂಡು ಇವ್ನಿಗೆ ಕಾಫಿ ಬಟ್ಲು ತೋರ್ಸಿ ಮನೆಗೆ ಅಟ್ಟಿದ್ದೂ ಉಂಟಂತೆ! ಅವಳ್ಹಿಂದೆ ಸಾಲಾಗಿ ಇದ್ವಲ್ಲಾ ತಂಗಿಯರು ಅವುಗಳೆಲ್ಲಾ ಬಾಗ್ಲ ಹಿಂದೆ ನಿಂತ್ಕೊಂಡು ಮುಸ ಮುಸಾಂತ ನಗೋವಂತೆ! ಥೂ! ಅಲ್ಲಿಗೆ ಹೋಗ್ಲೇ ಬಾರ್ದೂಂತ ಅಂದ್ಕೊಳ್ಳೋನಂತೆ. ಆದ್ರೆ ಅವಳ ಮೇಲಿನ ಪ್ರೀತಿ ಹೇಗೋ ಎಳೆದುಕೊಂಡು ಹೋಗೋದಂತೆ.

ಅವತ್ತೊಂದು ದಿನ ಅವಳ ಮನೆಗೆ ಹೋಗ್ತಾನೇ.... ಮನೆ ಮುಂಬಾಗ್ಲು ಅರ್ಧ ತೆರೆದಿದೆ. ಒಳಕ್ಕೆ ನುಗ್ಗಿದ ಯಾರೂ ಕಾಣ್ತಿಲ್ಲ. ಅಲ್ಲಿ ಇಲ್ಲೀಂತ ತೆರೆದ ಕೊಠಡಿಯಲ್ಲೆಲ್ಲಾ ಕಣ್ಣು ಹಾಯಿಸ್ದ. ಅವನ ಕಣ್ಮಣಿ ಎಲ್ಲೂ ಪತ್ತೇನೇ ಇಲ್ಲ. ಅಷ್ಟರಲ್ಲಿ ಆ ಕಂಕ್ಳಶಂಖ - ಅವಳ ತಮ್ಮ ಒಳಗ್ನಿಂದ ''ಅಕ್ಕಾ'' ಅಂತ ಅತ್ಕೊಂಡು ಬಂತಂತೆ. ಈ ಭಾವನ್ನ ಕಂಡು ಒಂದು ಕ್ಷಣ ಗಾಬರಿಯಾಯ್ತೇನೋ ಅಳು ನಿಲ್ಲಿಸ್ತಂತೆ. ತಕ್ಷಣ ಜ್ಞಾಪಕ ಬಂತೇನೋ ತನ್ನಕ್ಕನ್ನ ಅಳಿಸಿದೋನೂಂತ. ದುರುಗುಟ್ಟಿಕೊಂಡು ನೋಡಿ ಮುಂದೆ ಹೋಯ್ತು! ಇವನಿಗೆ ಅದನ್ನ ಕಾಣ್ತಿದ್ದಾಗೆ ಎಲ್ಲಿಲ್ಲದ ರೋಷ ಬಂತು. ತದ್ಕಿ ಹಾಕ್ಬಿಡೋಣಾಂತ ಇಲಿ ಮೇಲೆ ಹುಲಿ ಹಾರೋಲ್ವೇ ಹಾಗೆ ಹಾರಿದನಂತೆ. ಛೆ! ಛೆ! ಹಾಗೆಲ್ಲಾ ಕೋಪ ತೋರಸ್ಕೊಳ್ಳಲೇ ಬಾರದು. ಜಾಣತನದಿಂದ ಪರಿಸ್ಥಿತಿ ಸುಧಾರಿಸ್ಕೊಬೇಕೂಂತ ವಿವೇಕ ಹೇಳಿದ ಹಾಗೆ ಆಯ್ತಂತೆ. ತಕ್ಷಣ ನಗುವಿನ ಮುಖವಾಡ ಧರಿಸಿ ''ಬಾಮ್ಮಾ ಮರಿ! ನನ್ಕಂದ! ನಿನ್ನಕ್ಕ ಎಲ್ಲಿ!'' ಅಂತ ಅಂದೋನೆ ಪಕ್ಕದ ರೂಮಿಗೆ ಎತ್ಕೊಂಡು ಹೋದ. ಜೇನುಹನಿ ತರಹ ಸಿಹಿಯಾಗಿ ಮಧುರವಾಗಿ ''ಏನಪ್ಪ! ಗರಲಪುರಿ! ನಿನಗೆ ಮದ್ರಾಸಿಂದ ಏನು ತಂದು ಕೊಡ್ಲೀಂತ'' ಎತ್ತಿದ ಧ್ವನಿಯಲ್ಲಿ ಕೇಳಿದನಂತೆ. ಅದೇ ಕ್ಷಣ ಅವನ ಕೈ ಮಾತ್ರ ತನ್ನ ತೋರು ಮತ್ತು ಹೆಬ್ಬೆರಳಿನ ಮಧ್ಯ ಭದ್ರವಾಗಿ

ಹಿಡಿದು ಅಮುಕುತ್ತಿದ್ದನಂತೆ. ಅರ್ಥಾತ್ ಜಿಗುಟುತ್ತಾ ''ಹುಷಾರ್! ಸದ್ದುಗದ್ದಲ ಮಾಡ್ಬೇಡ! ಬರ್ತೀಯೇನೋ ಇನ್ಮುಂದೆ ನಿನ್ನಕ್ಕನ ಜೊತೆಗೆ'' ಅಂತ ಪಿಸುದನಿಯಲ್ಲಿ ಕೇಳುತ್ತಿದ್ದನಂತೆ. ಹೀಗೆ ಎಂಟ್ಹತ್ತು ಸಲ ಮಾಡಿ ಕೈ ಬಿಟ್ಟನಂತೆ.


ಗಾಬರಿಯಾದ ಮಗು ಭಾವನ ಸಿಹಿ ಮಾತಿಗೆ ನಗಬೇಕೋ ಅಥವಾ ಬೆದರಿಕೆ ಮಾತಿಗೆ ಅಳಬೇಕೋ ಗೊತ್ತಾದೆ ಕಣ್ಣಲ್ಲಿ ನೀರು ತುಂಬಿ ''ಮತ್ತೆ! ಮತ್ತೆ! ನೀನು ಮದ್ರಾಚಿಂದ ಬರ್ತಾ ತುಂಬಾ ತುಂಬಾ ಏಂಜಲ್ಲು ಬೂದುಮಾಮಿ ತಂಕೊಡು ಭಾವ!'' ಅಂತ ಬಿಕ್ಕಂತೆ.

ಹೀಗೆ ಬೆದ್ರಿಸಿ ಆ ಮಗು ಬಾಯಲ್ಲಿ ನಾನಕ್ಕನ ಜೊತೆ ಬರೋಲ್ಲ ಅಂತ ಹೇಳ್ಸಿ - ''ಏನ್ಮರಿ? ನಿನಗೆ ಮುಂದಿನ ಸರ್ತಿ ಬರ್ತಾ ತುಂಬಾ ಬಾದಾಮಿ, ಪೆನ್ಸಿಲ್ ಎಲ್ಲಾ ತಂದ್ಕೊಡ್ತೀನಿ. ಈಗ ಒಬ್ನೇ ಹೋಗಿ ಆಡ್ಕೋಂತ'' ಹೇಳಿ ಇನ್ನೊಮ್ಮೆ ಕಣ್ಣು ಬೆದರಿಕೆ ಹಾಕಿ ವಾಪಸ್ಸಾಗಿದ್ನಂತೆ.

ಅದೇ ಕೊನೆ ನೋಡಿ ಆ ಬೇತಾಳ ಅವನ ಅಕ್ಕನ್ನ ಬೆನ್ನಂಟಿದ್ದು.

★★★

ಆತ ತನ್ನ Twilight years ನಲ್ಲಿ ಇದನ್ನ ಹೇಳಿ ನಕ್ಕಾಗ ಕಟ್ಟು ಕಥೆಯೇನೊ ಅಂದ್ಕೊಂಡಿದ್ದೆ. ಆದ್ರೆ ಈ ಕಥೆ ಕಿರು ನಾಯಕ ಗರಲಪುರಿಶಾಸ್ತ್ರಿ (ಈಗ ಅವರೂ ವಯಸ್ಸಾದೋರು) ಈತನ್ನ ಊಟಕ್ಕೆ ಕರೆದಿದ್ದಾಗ ತುಪ್ಪ ಬಡಿಸ್ತಾ ''ಬೂದು ಮಾಮಿ ಭಾವಯ್ಯಂಗೆ ಒಂದು ಮಿಳ್ಳೆ ತುಪ್ಪಾ! ಏಂಜಲ್ಲು ಭಾವಯ್ಯಂಗೆ ಮತ್ತೊಂದು ಮಿಳ್ಳೆ ತುಪ್ಪಾಂತ ಉಪಚರಿಸಿದಾಗ ಇದು ಕಟ್ಟು ಕಥೆಯಲ್ಲಾ ಎನಿಸಿತ್ತು.



ಆ ನಾಕ!

– ನಾಚಿ

ನಮ್ಮೂರಿಗೆ ಹೊಸದಾಗಿ ಒಬ್ಬ ಪಂಡಿತರು ಬಂದಿದ್ದಾರಂತೆ. ಅವರ ಪ್ರಕಾರ ಪ್ರತಿ ರೋಗಕ್ಕೂ ಆಹಾರವೇ ಮದ್ದಂತೆ, ಯಾವ ಮಾತ್ರೆಯು ಬೇಕಿಲ್ಲವಂತೆ, ಪಥ್ಯವೂ ಇಲ್ಲವಂತೆ. ಈ ಸುದ್ದಿ ನಿನ್ನೆ ತಿಳಿದಿದ್ದೇ ತಡ, ಬೆಳಿಗ್ಗೆಯೇ ಅವರನ್ನು ನೋಡಬೇಕೆಂದು ನಾವು ನಿರ್ಧರಿಸಿದೆವು.

ಅದರಂತೆ ನಾವು ಮೂರು ಜನರೂ - ಅಂದರೆ, ಎಸಿಡಿಟಿ ರಾಜು, ಡಯಾಬಿಟಿಸ್ ಸುಬ್ರಾಯ ಮತ್ತು ಬಿ.ಪಿ. ಪೇಷಂಟ್ ನಾನು, ಬೆಳಿಗ್ಗೆ 9 ಗಂಟೆಗೇ ಪಂಡಿತರ ಮನೆಯಲ್ಲಿ ಹಾಜರಾದೆವು.

ಮೊದಲು ಎಸಿಡಿಟಿ ರಾಜು ಹುಳಿಮುಖ ಮಾಡಿಕೊಂಡೇ ಒಳಕ್ಕೆ ಹೋದ, ಹತ್ತು ನಿಮಿಷದ ನಂತರ ವಾಪಸಾದಾಗ ಅವನ ಮುಖ ಹಿಗ್ಗಿ ಹೀರೇಕಾಯಾಗಿತ್ತು. ''ಗುಲ್ಕನ್ ಕಣ್ರೋ, ಗುಲ್ಕನ್! ಗುಲ್ಕನ್ನೇ ಎಸಿಡಿಟಿಗೆ ರಾಮಬಾಣ. ಏನುಬೇಕಾದರೂ ತಿನ್ನಬಹುದು. ಆದರೆ ಮೊದಲು ಗುಲ್ಕನ್ ತಿನ್ನಬೇಕು ಅಷ್ಟೆ. ದಿನಕ್ಕೆರಡು ಸಲ ಬಾಳೆಹಣ್ಣಿನ ಜತೆ ಗುಲ್ಕನ್ ತಿಂದರೆ ಮೂರೇ ತಿಂಗಳಲ್ಲಿ ಎಸಿಡಿಟಿ ಮಾಯವಾಗುತ್ತೆ. ಸದ್ಯ ಬದುಕಿದೆ! ಇಷ್ಟು ದಿವಸ ನನಗೆ ಮನೇಲಿ, ಉಪ್ಪಿನಕಾಯಿ, ಬಾಳಕ, ತೊಕ್ಕು ಏನೂ ಹಾಕದೆ ಸಾಯಿಸಿದ್ದಾರೆ. ಇನ್ನು ಮೇಲೆ ನೋಡಿಕೋತೀನಿ. ಈಗ ಮನೆಗೆ ಹೋಗುವಾಗಲೇ 3 ಟಿನ್ನು ತಾಜಾ ಗುಲ್ಕನ್ ತೊಗೊಂಡು ಹೋಗಬೇಕು'' ಅಂತ ಉದ್ಗರಿಸುತ್ತಿದ್ದ.

ನಂತರ ಡಯಾಬಿಟೀಸ್ ಸುಬ್ರಾಯನೂ ಹೋಗಿ ಖುಷಿಯಾಗಿ ಬಂದ.

''ಸಿಹಿ ತಿನ್ನಲೇಬಾರದು ಅಂತ ಯಾರು ನಿಮಗೆ ಹೇಳಿದರಪ್ಪಾ? ಅಂತ ಪಂಡಿತರು ಕೇಳಿದರು. ಸಕ್ಕರೇಲಿ ಮಾಡಿದ್ದು ಮಾತ್ರ ನಿಷಿದ್ಧವಂತೆ. ಬೆಲ್ಲದಲ್ಲಿ ಮಾಡಿದ್ದನ್ನ ಧಾರಾಳವಾಗಿ ತಿನ್ನಿ. ಹೋಳಿಗೆ ತಿನ್ನಿ, ಸಜ್ಜಪ್ಪ ತಿನ್ನಿ, ಬೆಲ್ಲದ ಕೊಬ್ರಿ ಮಿಠಾಯಿ ತಿನ್ನಿ, ಹಾಲುಬಾಯಿ ತಿನ್ನಬಹುದಲ್ಲ ಕಾಯಿಕಡುಬು ತಿನ್ನಬಹುದು ಅಂತ ಒಂದರ ಮೇಲೊಂದು ಸಿಹಿತಿಂಡಿ ಹೇಳೋಕ್ಕೆ ಷುರು ಮಾಡಿದರು. ಅಲ್ಲೇ ನನಗೆ ಬಾಯಲ್ಲಿ ನೀರೂರೋಕ್ಕೆ ಷುರುವಾಯ್ತು. ಬಾಯಿ ವರೆಸಿಕೊಂಡು ಬರ್‍ತಿದ್ದೀನಿ. ನಾಳೆಯೇ ಹಾಲುಬಾಯಿ ಮಾಡಿಸ್ತೀನಿ. ನೀವೆಲ್ಲಾ ಬನ್ರೋ'' ಅಂದ ಸುಬ್ರಾಯ.

ನನ್ನ ಸರದಿ ಬಂತು. ''ಅಬ್ ಮೇರಾ ಕ್ಯಾಹೋಗಾ'' ಅಂದುಕೊಂಡು ರೂಮಿನೊಳಕ್ಕೆ ಹೋದೆ, ಪಂಡಿತರು ಶುಭ್ರವಾದ ಬಿಳೀ ಕಚ್ಚೆಪಂಚೆ, ಬಿಳೀ ಜುಬ್ಬ ಧರಿಸಿದ್ದರು. ಒಳ್ಳೇ ತೇಜಸ್ಸಿನ ಮುಖ. ಮಂದಹಾಸದಿಂದ ನಗುತ್ತಾ ''ಏನಪ್ಪಾ ನಿಮ್ಮ ತೊಂದರೆ?'' ಅಂತ ಕೇಳಿದರು.

''ನನಗೆ ಬಿ.ಪಿ. ಜಾಸ್ತಿ ಇದೆ. ಕರಿದಿದ್ದು ತಿಂದರೆ ಕೊಲೆಸ್ಟರಾಲ್ ಜಾಸ್ತಿಯಾಗತ್ತೆ. ಅದಕ್ಕೆ ಪಕೋಡ ಆಂಬೊಡೆಯಂಥ ಕರಿದ ತಿಂಡಿಯನ್ನು ತಿನ್ನಲೇಕೂಡದು ಅಂತ ಡಾಕ್ಟರು ಹೇಳಿದ್ದಾರೆ'' ಅಂದೆ.

''ಹೌದು, ಎಣ್ಣೇಲಿ ಕರಿದ ತಿಂಡಿ ಕೊಲೆಸ್ಟಾರಾಲ್ ಜಾಸ್ತಿ ಮಾಡತ್ತೆ ನಿಜ. ಹಾಗೇಂತ ಕರಿದ ತಿಂಡಿ ತಿನ್ನದೇ ಇರೋಕ್ಕಾಗತ್ಯೆ? ನಿವಾರಿನ್ ಹಾಕಿ ತಿಂಡಿ ಮಾಡಿಸಿದರಾಯ್ತು.''

''ನಿವಾರಿನ್ ಅಂದರೆ?'' ಅಂತ ಕೇಳಿದೆ.

''ನೋಡೀಪ್ಪ, ನಾವು ತಿನ್ನೊ ತರಕಾರಿನಲ್ಲಿ ಎಂಥಾ ಅದ್ಭುತ ಗುಣಗಳಿರುತ್ತೆ ಗೊತ್ತೇ? ಕೊಲೆಸ್ಟರಾಲ್ ನಿವಾರಿಸುವಂಥ ಸೊಪ್ಪುಗಳಿವೆ. ಅವನ್ನೇ ನಾನು ನಿವಾರಿಣಿ ಅಂದದ್ದು. ಅದನ್ನು ನೀವು ಉಪಯೋಗಿಸಬೇಕು ಅಷ್ಟೆ. ನೀವು ಪಕೋಡ ತಿನ್ನಬೇಕು ತಾನೇ? ಕಡ್ಲೆಹಿಟ್ಟಿನ ಜತೆ ಸಬ್ಬಸೀಗೆ ಸೊಪ್ಪು ಸೇರಿಸಿ ಪಕೋಡ ಮಾಡಿಸಿ, ರುಚೀನು ಚೆನ್ನಾಗಿರತ್ತೆ ಸಬ್ಬಸೀಗೆ ಸೊಪ್ಪು ಕೊಲೆಸ್ಟರಾಲ್ ಕಡಿಮೆ ಮಾಡತ್ತೆ. ಇನ್ನು, ಆಂಬೊಡೆ ತಿನ್ನಬೇಕಾದರೆ ಕಡಲೇಬೇಳೆ ಜತೆ ಪುದಿನ ಸೊಪ್ಪು ಹಾಕಿ ಮಾಡಿಸಿ, ಕೊಲೆಸ್ಟರಾಲ್ ಭಯವಿಲ್ಲ. ರುಚಿಯೂ ದಿವಿನಾಗಿರತ್ತೆ'' ಅಂದರು. ಕೇಳಿ ಪರಮಾನಂದವಾಯ್ತು.

''ಆಮೇಲೆ, ಪಂಡಿತರೇ, ಇನ್ನೊಂದು ವಿಷಯ....''

''ಏನು ಹೇಳಿ ಸಂಕೋಚ ಬೇಡೀಪ್ಪ'' ಅಂದರು.

''ನನಗೆ ಡಾಕ್ಟರ್ ಹೇಳಿದಾರೆ, ಪ್ರತಿನಿತ್ಯ ಬೆಳಿಗ್ಗೆ 5 ಗಂಟೆಗೇ ಎದ್ದು 6 ಕಿಲೋಮೀಟರು ವೇಗವಾಗಿ ನಡೆಯಬೇಕು. ಹೃದಯಕ್ಕೆ ಒಳ್ಳೇದು ಅಂತ.''

''ಕೂಡದು! ಖಂಡಿತಾ ಕೂಡದು! ಹಾಗೆ ಮಾಡಿದರೆ ನಾಡಿಬಡಿತ ಜಾಸ್ತಿಯಾಗತ್ತೆ, ಒಳ್ಳೇದಲ್ಲ. ಒಂದು ವಿಷಯ ತಿಳಿದುಕೊಳ್ಳಿ. ರಾತ್ರಿ ನಿದ್ದೆ ಮನುಷ್ಯನಿಗೆ ಬಹಳ ಮುಖ್ಯ. ಸ್ವಲ್ಪವೂ ಭಂಗ ಬಾರದೇ ರಾತ್ರಿ ನಿದ್ರೆ ಪೂರ್ತಿಯಾಗಿ ಮಾಡಿದರೆ ಎಷ್ಟೋ ರೋಗಗಳು ಬರೋದಿಲ್ಲ. ಒಳ್ಳೆಯ ನಿದ್ದೆಮಾಡಿ ನಿಮಗೇ ಎಚ್ಚರವಾದಾಗ, ಏಳುಗಂಟೆಯಾಗಲಿ, ಏಳೂವರೆಯಾಗಲಿ ಆಗಲೇ ಏಳಬೇಕು'' ಅಂದರು.

ಅಷ್ಟು ಹೊತ್ತಿಗೆ ಸರಿಯಾಗಿ ಗಂಟೆ ಶಬ್ದ ಕೇಳಿಸಿತು. ಪಂಡಿತರ ಮನೇಲಿ ಮಂಗಳಾರತಿ ಮಾಡುತ್ತಿರಬೇಕು ಅಂದುಕೊಂಡೆ. ನನ್ನನ್ನು ಯಾರೋ ಅಲ್ಲಾಡಿಸುತ್ತಿರುವಂತೆ ಆಯಿತು. ''ಏಳಿ! ಏಳಿ! ಅಲಾರಂ ಕೇಳಿಸಲಿಲ್ಲವೇ? 5 ಗಂಟೆ ಆಯ್ತು, ಎದ್ದು ವಾಕಿಂಗ್ ಹೋಗಬೇಕಲ್ಲ ಮರೆತಿರಾ'' ಅಂತ ನನ್ನಾಕೆ ನನ್ನನ್ನು ಎಬ್ಬಿಸಿದಳು. ಎಚ್ಚರವಾಯ್ತು.

''ಅಯ್ಯೋ ಹೋಯಿತೆ ಆ ನಾಕ! ಆಯ್ಯೋ ಬಂದಿತೆ ಈ ಲೋಕ!'' ಅನ್ನಿಸಿತು.

ಕಾಪಿಯಿಂಗ್ ಸಿಸ್ಟಂಸ್ ಲಿಮಿಟೆಡ್

– ಲೋಕನಾಥ ದೀಕ್ಷಿತ್

''ಪರೀಕ್ಷೆಗೆ ಓದ್ತಿದಿಯೇನೋ...'' ಕಾಲು ಅಲ್ಲಾಡಿಸಿಕೊಂಡು, ಅಲಲ್ಲಿ ಅಂಗಿ ತೊಟ್ಟ ಅಂಗನೆಯರ ಅಶ್ಲೀಲ ನೃತ್ಯವನ್ನು ಟಿ.ವಿ.ಯಲ್ಲಿ ತದೇಕ ಚಿತ್ತದಿಂದ ವೀಕ್ಷಿಸುತ್ತಿದ್ದ ವಂಶೋದ್ಧಾರಕನನ್ನ ವಿಚಾರಿಸಿದೆ.

''ವೀರಭದ್ರಪ್ಪನವರಿಗೆ ಹೇಳಿದಿನೀ.....'' ಟಿ.ವಿ. ಇಂದ ಕಣ್ಣು ತೆಗೆಯದೆ ಉತ್ತರಿಸಿದ.

''ಅದೇನು ಗೋಳು ಹುಯ್ಕತೀರ್ರೀ ಮಗೂನಾ ಒಂದು ಕ್ಷಣ ರಿಲ್ಯಾಕ್ಸ್ ಮಾಡ್ಕಳ್ಳಕ್ಕೆ ಬಿಡೊಲ್ಲಾ...'' ಅನ್ನುತ್ತಾ ಅಡುಗೆ ಮನೆಯಿಂದ ಇವಳು ಧಾವಿಸಿ ಬಂದಳು.

''ಅದೇನೆ ಇವನು ಪರೀಕ್ಷೆ ಓದ್ತಿದಿಏನೋ ಅಂದ್ರೆ, ವೀರಭದ್ರಪ್ಪನವರಿಗೆ ಹೇಳಿದಿನಿ ಅಂತಾನೆ...'' ರೇಗಿದೆ

''ಇವನು ನನ್ನ ಹತ್ರ ಎಲ್ಲಾ ಹೇಳಿದಾನೇ, ಆಯಿತೇ ಅವರು ಈಗ ಬಂದು ಡೀಟೈಲ್ಸ್ ಹೇಳ್ತಿನಿ ಅಂದಿದಾರೆ, ಅದೇನೋ ಕೊಡೋದು ಕೊಟ್ರೆ ಪಾಸೂಂತ ಆದ್ರೂ ಆಗುತ್ತೆ, ಕಣ್ಣಿಗೆ ಎಣ್ಣೆ ಬಿಟ್ಕಂಡು ಓದೋದು ತಪ್ಪುತ್ತೆ, ಮಗ ಪಾಸಾಗೋದು ನೋಡಬೇಕ್ರೀ...'' ಬುದ್ದಿ ಹೇಳಿದಳು.

ಈ ಸಮಯಕ್ಕೆ ಗೇಟು ಕಟಕಟಾಯಿಸಿತು. ಆನಂದಿ ಅವಸರಕ್ಕೆ ತನ್ನ ಬರ್‌ಮುಡಾಸ್ ಸರಿಪಡಿಸಿಕೊಂಡು ಎದ್ದು ನೋಡಿ, ''ಬನ್ನಿ ವೀರಭದ್ರಪ್ಪನವರೇ ಬನ್ನಿ, ನಿಮಗೇ ಕಾಯ್ತಿದ್ವಿ...'' ಸ್ವಾಗತಿಸಿದ.

ಮಹಾಭಾರತದ ಘಟೋತ್ಕಜನನ್ನು ಹೋಲುವ ವೀರಭದ್ರಪ್ಪ ನಿಧಾನವಾಗಿ ಬಂದು ಸೋಫಾ ಮೇಲೆ ಮಂಡಿಸಿ ''ನೋಡೀ, ನನಗೆ ಠೇಂ ಇಲ್ಲಾ, ಮಂತ್ರಿಗಳ ಮನೆಗೆ ಓಗಬೇಕು'', ಅಂದು ಕನ್ನಡಕ ಮೂಗಿಗೇರಿಸಿ, ಒರಗಿದರು. ಈಗ ಒಂದು ನಿಮಿಷ ಮೌನ.

''ನೋಡೀ ನಾನು ಹೇಳಿದೀನಿ, ನೀವು ಹೇಳಿದ್ರೆ ಇವರು ಒಪ್ಗತಾರೆ...'' ಇವಳು ಮೌನ ಮುರಿದಳು.

''ಏಕೇ, ನೀವು ಹೇಳಿದ್ರೆ ನಿಮ್ಮವರು ಕೇಳಾಕಿಲ್ಲವೇ ಹಿ...ಹಿ...'' ನಕ್ಕರು. ನಾನು ಸೂರು ನೋಡಿದೆ.

ಆಯ್ತು, ಇಷ್ಟಕ್ಕೆ ಬಂದ್ರಿ, ಮಕ್ಕಳು ಪೇಲ್ ಆದ್ರೆ ತಂದೆ ತಾಯಿಗಳ ಮನಸು ಬಲು ನೋಯ್ತದೆ. ಅದ್ಕೆ ಯಾರ ಮನ್ಸೂ ನೋಯಬಾಡ್ದು, ಉಡಗ್ರೂ ಮುಂದೆ ಬರಬೇಕು ಅಂತ ಯೋಚಿಸಿ ''ಕಾಪಿಯಿಂಗ್ ಸಿಸ್ಟಂಸ್ ಲಿಮಿಟೆಡ್'' ಅಂತ ಒಂದು ಕಂಪನಿ ನಡೆಸ್ತಿದಿವಿ. ಉಡಗ್ರು ಇದಕ್ಕೆ ಸೇರ್ಕಂಡ್ರೆ ಪಾಸಾಗಾಕೆ ಸಆಯ ಆಯ್ತದೆ.''

''ಹೌದೇ...'' ನಾನು.

ನಂ ಸಿಸ್ಟಂನಾಗೆ ಮೂರು ಟೈಪ್ ಐತೆ. ಒಂದು ಪೇಜರ್ ಸಿಸ್ಟಂ.

''ಪೇಜರ್ರೇ...'' ಇವಳು ಬಾಯಿ ಬಿಟ್ಟಳು.

ಊ! ಸಾವಿರ ರೂಪಾಯಿ ಕೊಟ್ರೆ ಉಡಗರಿಗೆ ಒಂದೊಂದು ಪೇಜರ್ ಕೊಡ್ತಿವಿ, ಅದ್ರಾಗೆ ಆನ್ಸರ್ ಬತ್ತೈತೆ ನೋಡ್ಕಂಡು ಬರೀಬೇಕು.

''ಎರಡನೇದು ಸೆಲ್ಯುಲಾರ್ ಸಿಸ್ಟಂ...''

''ಸೆಲ್ಯೂಲ್ಲಾರ್ರೇ...'' ಇವಳು.

ಐದು ಸಾವಿರ ಕೊಟ್ಟವರಿಗೆ ಒಂದೊಂದು ಫೋನ್ ಕೊಡ್ತಿವಿ ಕೇಳ್ಕಂಡು ಬರೀಬೇಕು...

''ಐದು ಸಾವಿರವೇ... ಒಂದು ಪಕ್ಷ ಈ ಹುಡುಗರು ಮಾತಾಡೋದು ಇನ್‌ವಿಸಿಲೇಟರ್‌ಗಳಿಗೆ ಗೊತ್ತಾಗಿ, ಡಿಸ್‌ಮಿಸ್ ಗಿಸ್‌ಮಿಸ್ ಮಾಡಿದ್ರೇ...'' ಅನುಮಾನ ವ್ಯಕ್ತಪಡಿಸಿದೆ.

''ಗೊತ್ತಾಯ್ತದೆ, ಆಗ್ದೆಬಿಡ್ತದಾ ಅವರನ್ನ ಸಿಸ್ಟಂ ಪ್ರಕಾರ ನೋಡ್ಕಂಡಿರ್ತಿವಿ ಏನೂ ಆಗಾಕಿಲ್ಲಾ...''

''ಒಂದು ಪಕ್ಷ ನೀವು ಹೇಳಿದ ಎರಡೂ ಸಿಸ್ಟಂ ಆಗೊಲ್ಲಪ್ಪಾ ಆಗ...'' ಮಗರಾಯ ವಾದ ಮಂಡಿಸಿದ.

''ಇದು ಒಳ್ಳೆ ಪ್ರಶ್ನೆ ಉಡಗ್ರೂ ಅಂದ್ರೆ ಇಂಗಿರಬೇಕು. ಪರವಾಗಿಲ್ಲ ಉಡ್ಗ ಚುರುಕಾಗವನೆ, ಇದ್ಕೆ ಒಂದು ಉಪಾಯ ಐತೇ, ಅದೇ ಡ್ಯೂಪ್ ಸಿಸ್ಟಂ...''

''ಡ್ಯೂಪ್ ಅಂದ್ರೇ...''

''ಅದೇ ಈ ಸಿನಿಮಾಗಳಲ್ಲಿ ಡ್ಯೂಪ್ ಅಂತಾ ಇರಾಕಿಲ್ಲವಾ...''

''ಓ... ಫೈಟಿಂಗೇ ಬೇರೆ ಲವ್ ಮಾಡೋಕೆ ಬೇರೆ ಅಂತಾ ಇರ್ತಾರಲ್ಲಾ....'' ಮಗರಾಯ

''ಆ... ಅಂಗೆಯಾ, ಈ ಉಡ್ಗರ ಬದಲು ಇನ್ನೊಂದು ಉಡ್ಗ ಬರಿಯಾದು,

ಇದು ಗ್ಯಾರಂಟಿ ಸಿಸ್ಟಂ, ಈ ಸಿಸ್ಟಂನಾಗೂ ಉಡ್ಗ ಪೇಲ್ ಆದ್ರೆ, ಮುಂದಿನ ಸಾರಿ ನಾವೆ ದುಡ್ಡು ಕಟ್ಟಿ ಬರಸ್ತಿವಿ, ಪ್ಯಾಸ್ ಮಾಡಸ್ತಿವಿ, ಅಂದಂಗೆ ಮಿನಿಸ್ಟರ್ ಮಕ್ಕಳಿಗೆಲ್ಲಾ ನಾವು ಇದನ್ನೆ ರೆಕಮೆಂಡ್ ಮಾಡಾದೂ...''

ಆಯ್ತೂ, ಈ ''ಫೂಲ್ ಪ್ರೂಫ್ ಡ್ಯೂಪ್ ಸಿಸ್ಟಂಗೆ'' ಎಷ್ಟಾಗೊತ್ತೆ ಹೇಳಿಪ್ಪಾ, ಒಟ್ಟಿನಲ್ಲಿ ನಮ್ಮ ಹುಡುಗ ಪಾಸಾಗಬೇಕು....'' ಇವಳು.

''ಒಂದು ಇಪ್ಪತ್ತೈದು ಸಾವಿರ ಆಯ್ತದೆ, ರಿಸ್ಕ್ ಇರ್‍ತೈತೆ ನೋಡೀ...'' ವೀರಭದ್ರನ ಈ ನುಡಿ ನನ್ನ ಕಿವಿಗೆ ಬೀಳುತ್ತಲೇ, ಶ್ರೀರಾಮರಕ್ಷೆ ಅನ್ನುತ್ತಾ ಕಳಗೆ ಬಿದ್ದೆ.

''ಅಯ್ಯೋ, ಇವರು ಏಕೆ ಹೀಗೆ ಬಿದ್ರೂ...'' ಇವಳು.

''ಇಂಗೆ ಆಯ್ತದೆ, ಪೀಸ್ ಕೇಳಿದ್ರೆ ಯಜಮಾನ್ರು ಇಂಗೆ ಬಿದ್ದೇ ಬೀಳ್ತಾರೆ, ನಾನು ಬತ್ತಿನಿ ಮಂತ್ರಿಗಳ ಮನೆಗೆ ಓಗಬೇಕು...'' ಅಂದು ವೀರಭದ್ರಪ್ಪ ದಾಪುಗಾಲು ಹಾಕಿ ನಡೆದಿದ್ದು ನನಗೆ ಮಂಪರಿನಲ್ಲಿ ಕೇಳಿಸಿತು.

ಬೋನ್ಸಾಯ್

ಬೋನ್ಸಾಯ್ - ಅಂದ್ರೆ
ಬೋನ ಸಾಯಿ-
ಗಿಡಗಳನ್ನ, ಬೋನಿನಲ್ಲಿಟ್ಟಂತೆ
ಉಸಿರು ಕಟ್ಟಿಸಿ ಬೆಳೆಸಿ ಸಾಯಿಸೋ ಕಲೆ
ಅಥವಾ
ಬೋನ - ಅಂದ್ರೆ
ಅನ್ನ-ನೀರು ಕಾಣಿಸದೆ
ಸಸಿಗಳನ್ನ
ಸಾಯಲೂ ಬಿಡದೆ
ಬದುಕಲೂ ಬಿಡದೆ
ಬೆಳೆಸೋ ಒಂದು ತರಹ ಹಿಂಸೆ
ತರುಹಿಂಸೆ.

–ಹೆಚ್.ವಿ. ವೆಂಕಟಸುಬ್ಬಯ್ಯ

ರಾಣಿಯು ಬಂದಳು...

- ನಕ್ಷತ್ರಿಕ

ಗಂಡ ಹೆಂಡ್ತಿ ಇಬ್ರೂ ಕೆಲ್ಸದಲ್ಲಿರ್‌ಬಾರ್ದು... ಇದ್ರೂ ಟ್ರಾನ್ಸ್‌ಫರಬಲ್ ಕೆಲ್ಸದಲ್ಲಿರ್‌ಬಾರ್ದು ಅಂತ ರಾಣಿ ಹಣೆ ಚಚ್‌ಕೊಂಡು ಅಂದ್ಕೊಂಡಿದ್ದು ನೂರಾ ಹನ್ನೊಂದನೇ ಸಾರಿ. ಸ್ವಲ್ಪ ದಿವ್ಸ ಎಲ್ಲ ಚನ್ನಾಗಿತ್ತು. ಅಂದ್ರೆ ಮದ್ವೆಯಾದ ಹೊಸದರಲ್ಲಿ. ಹೇಗೇಂದ್ರೆ ರಾಣಿಗೆ ಸರ್ಕಾರಿ ಕೆಲಸ. ಅವಳ ರಾಜಂಗೆ ಅರ್ಥಾತ್ ಶಂಕರಂಗೆ ಒಂದು ಪ್ರೈವೇಟ್ ಆಫೀಸಿನಲ್ಲಿ ಕೆಲ್ಸ. ಮದ್ವೆ ಅಂತ ಫಿಕ್ಸ್ ಆಗ್ಬೇಕಾದ್ರೆ ಬಹಳ ಮುಖ್ಯವಾದ್ದು ದೈಹಿಕ ಆಕರ್ಷಣೆ. ಯಾವಾಗ ನಮ್ಮ ಸಮಾಗಮ ಆಗುತ್ತೋ ಅನ್ನೋ ಕಾತುರ. ಆ ಕಾತುರ, ಆತುರದಲ್ಲಿ ಏನು ಸಮಸ್ಯೆ ಬಂದ್ರೂ ನಿಭಾಯಿಸಿಯೇನು ಅನ್ನೋ ಛಲ. ಅದಕ್ಕೇ ಸಮಸ್ಯೆ ಬಂದು ಅಮರಿಕೊಂಡಾಗ ಬಾಯಿಬಾಯಿ ಬಿಡೋದು.

ಎಲ್ಲ ಚನ್ನಾಗಿದೆ ಅಂದ್ಕೊಂಡಾಗ ರಾಣಿಗೆ ಬೇರೆ ಊರಿಗೆ ವರ್ಗ ಆಯ್ತು. ಶಂಕರ ಏನೇನೋ ಮಾಡ್ದ, ಶಿಫಾರಸು ಮಾಡಿಸ್ದ. ಆದ್ರೆ ಏನೂ ಪ್ರಯೋಜ್ನ ಆಗ್ಲಿಲ್ಲ, ಕೊನೆಗೆ ತಾನೂ ಅದೇ ಊರಿಗೆ ಟ್ರಾನ್ಸ್‌ಫರ್ ಮಾಡಿಸ್ಕೊಳೋಣ ಅಂದ್ರೆ ಆ ಊರಲ್ಲಿ ಅವನ ಆಫೀಸು ಬ್ರಾಂಚಿಲ್ಲ, ರೀ... ನಿಮ್ಮ ಕೆಲಸ ಬಿಸಾಕಿ ಬಂದ್‌ಬಿಡ್ರಿ ಆ ಊರಲ್ಲಿ ಒಂದು ಜೆರಾಕ್ಸ್ ಅಂಗ್ಡಿ ಇಟ್ಕೊಂಡ್ರೂ ಆಯ್ತು ಅಂತ ರಾಣಿ ಅಂದದ್ದು ಶಂಕರನ ಪೌರುಷಾನೇ ಕೆಣಕ್ತು. ಉದ್ಯೋಗಂ ಪುರುಷ ಲಕ್ಷಣಂ ಅಲ್ವೆ ಹಾಗೆ.

ಸರಿ ಏನು ಡಿಸೈಡ್ ಆಯ್ತು ಅಂದ್ರೆ, ರಾಣಿ ವರ್ಗವಾದ ಊರಿಗೆ ಹೋಗಿ ರಿಪೋರ್ಟ್ ಮಾಡ್ಕೊಳೋದು, ಅವಳ ದೂರದ ನೆಂಟರ ಮನೇಲಿ ಇರೋದು, ತಿಂಗಳಿಗೆ ಒಂದೆರಡು ಸಾರಿ ಅವಳು ಬರೋದು... ಒಂದೆರಡು ಸಾರಿ ಶಂಕರ ಹೋಗೋದು. ಈ ಮಧ್ಯೆ ಅವಳಿಗೆ ಮತ್ತೆ ಇದೇ ಊರಿಗೆ ಟ್ರಾನ್ಸ್‌ಫರ್ ಮಾಡಿಸಲು ಟ್ರೈ ಮಾಡ್ತಿರೋದು ಅಂತ. ಇದು ಸಕ್ಸಸ್‌ಫುಲ್ ಆಗಿ ನಡೀತಿದೆ.

ಆದ್ರೆ ಈಚೆಗೆ ಒಂದು ತಿಂಗಳಿಂದ ಶಂಕರ ಬಂದಿಲ್ಲ. ಕೆಲಸದ ಒತ್ತಡದಿಂದ, ಜೊತೆಗೆ ನೆಂಟರ ಮನೆಯಲ್ಲಿ ಅಜ್ಜಿಗೆ ಹುಷಾರಿಲ್ದೆ ಇದ್ದಿದ್ರಿಂದ ರಾಣಿಯೂ ಹೋಗೋಕೆ ಆಗ್ಲಿಲ್ಲ, ಹೀಗಾಗಿ ಇಬ್ರಲ್ಲೂ ತುಡಿತ ಹೆಚ್ಚಾಗಿತ್ತು, ಒಂದೆರಡ್ಸಾರಿ ಫೋನ್ ಮಾಡಿದ್ದಾಗ ಶಂಕರ್ ಸ್ವಲ್ಪ ಬಿಸಿ ಇದೀನಿ ರಾಣಿ.. ಬಂದ್‌ಬಿಡ್ತೀನಿ ಒಂದೆರಡು ದಿನ ತಡ್ಕೊ ಅಂದಿದ್ದ.

ಆದ್ರೆ ಒಂದು ಸೆಕೆಂಡ್ ಸಾಟರ್ಡೆ ರಾಣಿಗೆ ತಡೆಯೋಕೆ ಆಗ್ದೆ ಗಂಡನ ಮನೆಗೆ ಹೊರಟೇ ಬಿಟ್ಳು. ಮಧ್ಯಾಹ್ನ ಕೂತ್ರೆ ರಾತ್ರಿ ಗಂಡನೂರಿಗೆ ಸೇರೋಷ್ಟು ದೂರ. ಗಂಡನಿಗಿಷ್ಟವಾದ ಕೊಬ್ರಿ ಮಿಠಾಯಿ, ಕೋಡುಬಳೆ ಮಾಡ್ಕೊಂಡಿದ್ಲು,

ಒಂದೆರಡು ಹೊಸ ಕರ್ಚೀಫು, ಸಾಕ್ಸು, ಸೆಂಟು ಎಲ್ಲ ತಗೊಂಡ್ಳು, ಕೊನೇಗೆ ಒಂದು ಪ್ಯಾಕ್ ಐಟಿಸಿ ಕಿಂಗ್ ತಗೋಳೋದು ಮರೀಲಿಲ್ಲ.

ಮನೇಲಿ ಭವ್ಯವಾದ ಸ್ವಾಗತ. ಅತ್ತೆ, ಮಾವ ನಗುನಗುತ್ತಾ ಸ್ವಾಗತಿಸಿದರು. ಕಾಫಿ ಕೊಟ್ರು, ಚೀಲ ಕೈಗೆ ತಗೊಂಡು ಕೊಬ್ರಿಮಿಠಾಯಿ ಕೋಡುಬಳೆ ತಿಂದು ತುಂಬಾ ಚನ್ನಾಗಿದೆ... ನೀನು ಮಾಡಿದ್ದಾ ಅಂದರು ಲೇ ಮಗು ಸುಸ್ತಾಗಿ ಬಂದಿದೆ ಕಾಫಿ ಕೊಡೆ, ರಾತ್ರಿ ಏನಾದ್ರೂ ಸ್ಪೆಷಲ್ ಮಾಡು ಅಂದರು ಮಾವ. ರಾಣಿ ಹೋಗಿ ಸ್ನಾನ ಮಾಡಿ ಬಂದಳು. ಬಟ್ಟೆ ಬದಲಾಯಿಸಿದಳು. ಕಾಫಿ ಆಯ್ತು. ಏನೇನೆಲ್ಲ ಆದ್ರೂ ಶಂಕರ ಪತ್ತೇ ಇಲ್ಲ. ಇವರೆಲ್ಲಿ ಅಂತ ಹೇಗೆ ಕೇಳೋದು. ಅವರಾದ್ರೂ ಹೇಳ್ಬಾರ್ದೆ... ಎಲ್ಲಿ ಹೋಗಿರಬಹುದು. ಪ್ರಯಾಣದ ಆಯಾಸ, ನಿದ್ದೆ ಬರ್ತಿತ್ತು ಜೊತೆಗೆ ಸ್ವಲ್ಪ ಕೋಪವೂ ಬರೋಕೆ ಆರಂಭವಾಯ್ತು. ನಾನು ದಿಡೀರ್ ಅಂತ ಊರಿಗೆ ಬಂದದ್ದು ಅವರಿಗೆ ಸರ್ಪೈಸ್ ಆಗಿ ಒಳಕ್ಕೆ ಎಳ್ಕೊಂಡು ಬಾಗಿಲು ಹಾಕಿ ಅಯ್ಯಮ್ಮ ಅಯ್ಯಯ್ಯಮ್ಮ ಅನ್ನುವಷ್ಟು ಬಿಗಿಯಾಗಿ ತಬ್ಕೊಂಡು... ಅಂತೆಲ್ಲ ಕನಸು ಕಂಡೋಳಿಗೆ ದಿಂಬೇ ಗತಿಯಾಯ್ತು. ''ನಿಧಾನಕ್ಕೆ ಊಟ ಮಾಡಮ್ಮ ನೀನು ಆ ಊರಿಗೆ ಹೋದ್ಮೇಲೆ ಸಣ್ಣಗಾಗಿ ಹೋಗಿದೀಯ'' ಅಂದು ಅತ್ತೆ ಉಪಚಾರ ಮಾಡಿದರು. ಮನೇಲಿ ಶಂಕರನ ದನಿಯಿಲ್ಲ, ಓಡಾಟವಿಲ್ಲ, ಹೀಗಾಗಿ ಅವಳಿಗೆ ಊಟ ಸೇರಲಿಲ್ಲ. ಕೇಳೇಬಿಡೋಣ ಅಂದ್ಕೊಂಡ್ರೆ ಅದ್ಯಾಕೋ ಬಾಯೇ ಬರ್ತಿಲ್ಲ.

ಊಟ ಆದ್ಮೇಲೆ ನೇರ ಕೋಣೆಗೆ ಹೋದಳು. ಯಾವುದಾದರೂ ಊರಿಗೆ ಹೋಗಿರಬಹುದು ಬರ್ತಾರೆ ಅಂದು ಕಾದಳು. ಒರ್ಗಿತ್ತಿ ಮಗು ಚೆಲ್ವಾರಿನ ಕರ್ದು ಹೋಗಪ್ಪ ನಿಮ್ಮ ದೊಡ್ಡಪ್ಪನ್ನ ಕರಿ ಅಂದಳು. ಅದು ಕರಿಯಲ್ಲ ಅಂದು ಹೊರಟುಹೋಯ್ತು. ತುಂಬಾ ಸುಸ್ತಾಗಿದೆ ಮಲ್ಕೋಮ್ಮ ಅಂದು ಅತ್ತೆ ದೀಪವಾರಿಸಿ ಹೋದರು.

ರಾಣಿಗೆ ಬಿಕ್ಕಿ ಬಿಕ್ಕಿ ಅಳುವಂತಾಯ್ತು. ಒಂದು ತಿಂಗಳಾಯ್ತು ಅಂತ ಆಸೆಯಿಂದ ಬಂದ್ರೆ ಹೀಗೇನ ಇವರು ಮಾಡೋದು. ಅಲ್ಲ ಅವರೆಲ್ಲಿ ಹೋಗಿದಾರೆ ಅಂತ ಒಂದ್ಮಾತು ಹೇಳ್ಬಾರ್ದಾ. ಯಾಕೆ ಹೀಗೆ ಎಲ್ರೂ ಗೋಳು ಹುಯ್ಕೊತಾರೆ... ಅವರು ಬರ್ಲಿ ವಿಚಾರಿಸ್ಕೊತೀನಿ ಅಂದ್ಕೊಂಡ್ಳು, ಆದ್ರೆ ಅವಳಿಗೆ ನಿದ್ದೆ ಹತ್ತಲಿಲ್ಲ. ಶಂಕರ ಇದ್ದಿದ್ರೆ ಅವನು ಮಾಡಬಹುದಾದ ಚೇಷ್ಟೆಗಳ ಮೇಲೇ ಗಮನ, ಅದೇ ಯೋಚನೆ.

ರಾತ್ರಿನೇ ನಿರ್ಧಾರ ಮಾಡಿದ್ಲು ಬೆಳಗ್ಗೆ ವಾಪಸ್ ಹೊರಡೋಣ. ಅವರು ಅಲ್ಲಿಗೆ ಬರ್ಲಿ ವಿಚಾರಿಸ್ಕೊತೀನಿ. ನಾನೂ ಹೀಗೆ ಅವರನ್ನ ಆಟ ಆಡಿಸದಿದ್ರೆ ಯಾಕೆ ಅಂತ ಛಲ ತೊಟ್ಟು. ಪಾಪ ಇಡೀ ರಾತ್ರಿ ಅವಳು ಹೀಗೇ ಹೊರಳಾಡಿದ್ಲು, ತೊಳಲಾಡಿದ್ಲು.

ಸರಿ... ಬೆಳಿಗ್ಗೆ ಆಯ್ತು, ರಾತ್ರಿ ಎಲ್ಲ ಅನುಭವಿಸಿದ ದುಃಖ, ವೇದನೆಯಿಂದ ಕೋಪ ಅಮರಿಕೊಂಡಿತ್ತು. ದುಡು ದುಡು ಅಂತ ಸ್ನಾನ ಮಾಡಿದ್ಲು. ಒಂದ್ ಲೋಟ ಕಾಫಿ ಹುಯ್ಕೊಂಡ್ಳು, ಬ್ಯಾಗ್ ಹಿಡಿದು ನಾನು ಬರ್ತೀನತ್ತೆ ಅಂದಳು.

ಆಗ ಮಾವನ ಮಾತು ಕೇಳಿತು

''ಅಗೋ ಶಂಕ್ರ ಬಂದ್ನಲ್ಲ''

ಶಂಕರ ಕೈಲಿ ಬ್ಯಾಗ್ ಹಿಡಿದು ಒಳಗೆ ಬರ್ತಿದ್ದ. ಒಳಕೋಣೆಯ ಬಾಗಿಲಲ್ಲಿ ನಿಂತಿದ್ದ ರಾಣಿನ ತಳ್ಕೊಂಡೇ ಕೋಣೆಯೊಳಗೆ ಹೋದ ರಾಣಿ ಅತ್ತೆಳು, ನಕ್ಕಳು.

''ನಂಗೊತ್ತಿತ್ತು ನೀನು ಬಂದಿರ್ತೀಯ ಅಂತ... ನೆನ್ನೇನೇ ಬರಣ ಅಂತ ಹೊರಟೆ ಆದ್ರೆ ಬಸ್ಸು ಮಿಸ್ ಆಯ್ತು'' ಅಂದು ಅವಳನ್ನ ತಬ್ಕೊಂಡು ಒಂದು ತಿಂಗಳ ಬಾಕಿಯ ಪ್ರಿಲಿಮಿನರಿ ರೌಂಡ್ ಮುಗಿಸ್ದ.

ಅವಳಿಗೆ ಕೋಪ ಆರಿರ್ಲಿಲ್ಲ ಮುಷ್ಟಿಯಿಂದ ಅವನೆದೆಗೆ ಗುದ್ದುತ್ತಾ ಇದ್ದಳು.

''ನಿಂಗೊಂದು ಸರ್ಪೈಸ್... ನಾನು ನನ್ನ ಸ್ನೇಹಿತರ ಜೊತೆ ಎಂ.ಎಲ್.ಎ. ಮನೆಗೆ ಹೋಗಿದ್ದೆ. ಅಬ್ಬಬ್ಬ ಅಂದ್ರೆ ಇನ್ನೊಂದು ತಿಂಗಳಲ್ಲಿ ನಿನ್ನನ್ನ ಇದೇ ಊರಿಗೆ ಟ್ರಾನ್ಸ್‌ಫರ್ ಮಾಡ್ತಾರಂತೆ'' ಅಂತ ಶಂಕರ ಹೇಳಿದ ತಕ್ಷಣವೇ ರಾಣಿಗೆ ಮೂಡ್ ಬಂದು ಶಂಕರನನ್ನೇ ವೈಟ್ ಲಿಫ್ಟ್ ಮಾಡಿಬಿಟ್ಳು.

ಹಿಂದಿ ಸಿನಿಮಾದ ಹೀರೋಯಿನ್ನುಗಳಿಂದ ನೋಡಿ ಕಲಿತದನ್ನೆಲ್ಲ ಶಂಕರನ ಮೇಲೆ ಪ್ರಯೋಗಕ್ಕೆ ಸ್ಟಾರ್ಟ್ ಮಾಡ್ದಾಗ ಈ ರಂಪ ರಾದ್ಧಾಂತನೆಲ್ಲ ನೋಡ್ತಾ ಬಾಗಿಲಲ್ಲೇ ನಿಂತಿದ್ದ ಚಿಲ್ಟಾರೀನ ಒಂದು ಏಟು ಕೊಟ್ಟು ಕರ್ಕೊಂಡು ನಿಧಾನಕ್ಕೆ ಬಾಗಿಲು ಹಾಕ್ಕೊಂಡ್ರು ಅತ್ತೆ.

ಬೆರಗು ಕಾಂಡ

ಪ್ರ
ಕಾಂಡ ಪಂಡಿತ
ನಿಗೆ
ಬೇರೇ
ಬೇರೆ
ಕಾಂಡಕ್ಕಿಂತ.
ಬೇರೇ-
ನೂ ಅರಿಯದವ

ಕಂಡ
ಕಾಂಡದಲಿ
ಬೇರೇ-
ನು ಇಡೀ ಗಿಡ-
ದ ಖಂಡ ಬ್ರಹ್ಮಾಂಡ.
ಇದೆ
ಬೆರಗು ಕಾಂಡ

– ಎನ್. ಪ್ರಕಾಶ್

ಆಯುಷ್ಕರ್ಮ

– ಜಿ.ಎಸ್.ಜಿ.

ಈ ದಿನಗಳಲ್ಲಿ ನಾನು ಕ್ಷೌರಿಕನಿಗೆ ತಲೆ ಬಾಗುವುದು ಅಪರೂಪ. ಅಂದರೆ ನಾನು ನೀಳಕೇಶಿಯೂ ಅಲ್ಲ ಜುಟ್ಟುಧಾರಿಯೂ ಅಲ್ಲ. ತಲೆಯಲ್ಲಿ ಕೂದಲಿಲ್ಲ ಅಷ್ಟೆ. ಬಾಲ್ಡಿ. ತಲೆ ತಾಮ್ರದ ಚೊಂಬು. ಆದರೂ ಆರು ತಿಂಗಳಿಗೆ ಒಮ್ಮೆಯಾದರೂ ಕತ್ತು - ಕಿವಿಗಳ ಹಿಂದಿನ ಕೂದಲು ಸುರುಳಿ ಸುರಳಿಯಾದಾಗ ಅದೂನೂ ಮಡದಿ ಮಕ್ಕಳು "ಸೆಲೂನಿಗೆ ಹೋಗೋಲ್ವೆ?!" ಎಂದು ಕೇಳಿದಾಗ ಕಳೆ ಕೀಳಿಸಬೇಕಾಗುತ್ತದೆ.

ಹೀಗೆ - ಕಳೆ ಕೀಳಿಸಲು ಈಚೆಗೆ ಒಂದು ಭಾನುವಾರ ಹೋದಾಗ ಮಾಮೂಲು ರಷ್ಷಿನಲ್ಲಿ ನನ್ನ ಸರದಿಗಾಗಿ ಕಾಯುತ್ತಿದ್ದಾಗ ಹಳೆಯ ನೆನಪುಗಳು ಮರುಕಳಿಸಿದವು.

ಸುಮಾರು ಐವತ್ತು ವರುಷಗಳ ಹಿಂದಿನ ಮಾತು. ನಾನು ಆಗ, ಈಗಿನ ಆರನೆಯ ಅಥವಾ ಏಳನೆಯ ತರಗತಿಯಲ್ಲಿ ಇರಬೇಕು. ಆಗೆಲ್ಲಾ ರಾಜ ಕಪೂರ್ - ದೇವಾನಂದರ ಕಾಲ. ಗುಬ್ಬಳಿ ಬರುವಂತೆ ಮೆಟ್ಟಿಲು ಮೆಟ್ಟಿಲು ಇರುವಂತೆ ಕ್ರಾಪು ಬಿಡಬೇಕು.

ನಮ್ಮ ತಂದೆ ಮೇಷ್ಟ್ರು - ಸ್ಕೂಲಲ್ಲೂ ಹೌದು, ಮನೆಯಲ್ಲೂ ಹೌದು. ಬೆಂಕಿಯ ಚೆಂಡು. ಆನೆ ಪಟಾಕಿ ಸರ ಹಚ್ಚಿದ ಹಾಗೆ.

ಮನೆಯಲ್ಲೂ ಖಾಸಗಿ ಪಾಟ ಹೇಳುತ್ತಿದ್ದರು. ಮನೆಯೂ ಸಮಾಂತರ ಶಾಲೆಯೆ ಆಗಿತ್ತು. ಆಗ್ಗೆಲ್ಲಾ ಪಾಠದ ಫೀಸು in cash ಅಲ್ಲ in kind. ಕ್ಷೌರಿಕ ಸುಂಕಪ್ಪನ ಮಕ್ಕಳು ಮನೆಗೆ ಪಾಠಕ್ಕೆ ಬರುತ್ತಿದ್ದರು. ಅಂದಮೇಲೆ ನಮ್ಮ ತಲೆಗಳು ಸುಂಕಪ್ಪನ ಕೈಯಲ್ಲಿ. ಸುಂಕಪ್ಪ ನಮ್ಮ ವಿಷಯದಲ್ಲಿ unkind.

ಕೂದಲು ಬೆಳೆದಿರಲಿ - ಬೆಳೆಯದಿರಲಿ ತಿಂಗಳಿಗೊಂದುಸಲ ಮೊದಲ ಭಾನುವಾರ ನಮ್ಮ ತಲೆಯನ್ನು ಸುಂಕಪ್ಪನಿಗೆ ಕೊಡಲೇಬೇಕು. ಮನೆಯಲ್ಲಿ ನಾನು ಆತನೆದುರು ಕುಳಿತಾಗ ತೀರ್ಥರೂಪರ ಸರದಿ ಮುಗಿದಿರುತ್ತಿತ್ತು. ಹೋಗುವಾಗ "ಇವನಿಗೆ ಸಣ್ಣಗೆ ಮಾಡಪ್ಪ" ಎಂದು ಗುಡುಗಿ ಹೋಗುತ್ತಿದ್ದರು.

ಸುಂಕಪ್ಪನ ಆಕೃತಿ ರೂಪದರ್ಶಿ ಕಾದಂಬರಿಯ ಗೌರಿಬಾಲ್ಡಿಯನ್ನು ನೆನಪಿಗೆ ತರುತ್ತಿತ್ತು. ಮುದುಕ ಬಲಗಿವಿ ಮುಚ್ಚುವ ಹಾಗೆ ಸುತ್ತಿದ ಪೇಟ ಬಿಳಿಯ ಗಿರಿಜಾ ಮೀಸೆ. ಒಂದು ಕಣ್ಣಲ್ಲಿ 'ಹೂ' ಕೂತಿತ್ತು, ಏಕಾಕ್ಷ. ಇದ್ದ ಒಂದು ಕಣ್ಣಿಗೆ ಪೊರೆ

ಬರುತ್ತಿತ್ತು. ಮೇಲಿನ ಎರಡು ಹಲ್ಲಿಲ್ಲದ ವಸಡನ್ನು ಬಿಳಿಯ ಮೀಸೆ ಮರೆಮಾಡಿತ್ತು.

ಆತನ ಉಪಕರಣಗಳು ಪ್ರಾಯಶಃ ಆತನ ಮದುವೆಯಲ್ಲಿ ಮಾವ ಕೊಟ್ಟ ಬಳುವಳಿ ಇರಬೇಕು. ನಂತರ ಹೊಸದನ್ನು ಕೊಂಡಿಲ್ಲ. ಅವುಗಳನ್ನಿಡುವುದಕ್ಕೆ ಹಳೆಯದೊಂದು ಅಲ್ಯೂಮಿನಿಯಂ ಪೆಟ್ಟಿಗೆ; ಕೂದಲನ್ನು ಕತ್ತರಿಸಿದ ಮೆಶೀನಿನ ಹಲ್ಲುಗಳು ಸುಂಕಪ್ಪನ ಹಲ್ಲುಗಳಂತೆ ಅಲ್ಲಲ್ಲಿ ಬಿದ್ದಿದ್ದವು.

ನನಗಂತೂ ಆತನ ಮುಂದೆ ಮಣೆಯ ಮೇಲೆ ಕೂರುವಾಗ ಮಾರಿ ಹಬ್ಬದಲ್ಲಿ ಬಲಿಕೊಡುವ ಚೆಂಡು ಹೂವಿನ ಹಾರ ಹಾಕಿಕೊಂಡು 'ಮ್ಯಾ' ಎಂದು ಕಿರುಚುತ್ತಿರುವ ಮೇಕೆಯ ನೆನಪಾಗುತ್ತಿತ್ತು. ನನ್ನ ಕೊರಳಿಗೆ ಎದೆ ಮುಚ್ಚುವಂತೆ ಹೊದಿಸಿದ್ದ ಕೆಂಪು ಟವೆಲ್ಲು - ಚೆಂಡು ಹೂವಿನ ಹಾರವನ್ನು ನೆನಪಿಗೆ ತರುತ್ತಿತ್ತು.

ಸುಂಕಪ್ಪ ತನ್ನ ನಾಲಿಗೆಯನ್ನು ತುಟಿಯ ಮೇಲೆ ತಂದು ಮೂಗಿನ ಕೆಳಗೆ ಮಡಿಚಿ ಎರಡೂ ಕೈಲಿ ಮೆಶೀನಿನ ಬಾಹುಗಳನ್ನು ಹಿಡಿದು ಅದರ .... ಹಲ್ಲಿನ ದವಡೆಗಳಿಂದ ನನ್ನ ಕುತ್ತಿಗೆ ಮೇಲಿನ ಕೂದಲುಗಳನ್ನು ಎಳೆದು ಕೀಳುವಾಗ 'ಉರಿ' ನೋವುಗಳಿಂದ 'ಹಾ' ಎಂದು ಕಿರುಚುವಂತಾಗುತ್ತಿತ್ತು.

ಯೂಪ ಸ್ಥಂಭದ ಕವೆಗಳ ಮೇಲೆ ತನ್ನ ಅಸಹಾಯಕ ಕತ್ತನ್ನಿಟ್ಟು ಮೇಲೆರಗುವ ಕೊಡಲಿಯನ್ನು ಕಾಣದ ಕೋಣನಂತಾಗಿತ್ತು ನನ್ನ ಸ್ಥಿತಿ. ಮೆಶೀನಿನ ಬಾಹುಗಳನ್ನು ಹಿಡಿದ ಸುಂಕಪ್ಪ ಎರಡೂ ಕೈಗಳಿಂದ ಹಿಡಿದು ಕತ್ತಿಯನ್ನು ಮೇಲಕ್ಕೆತ್ತಿ ನಿಂತಿದ್ದ ಕಟುಕನಂತೆ ಕಂಡ!

ಆತನ ಕತ್ತಿಯಿಂದಲೇ ನನಗೆ ತಿಳಿದದ್ದು ನನ್ನ ರಕ್ತ ಎಷ್ಟು ಕೆಂಪು ಎಂದು. ಕತ್ತನ್ನು ಕೆತ್ತಿದ ಮೇಲೆ ರಕ್ತ ಸಿಕ್ತ ಜಾಗಗಳ ಮೇಲೆ ನೀರಲ್ಲಿ ನೆನಸಿದ ಪಟಿಕದ ಹರಳನ್ನು ಆಡಿಸಿ ಬಾಯಿ ಬಡಿದುಕೊಳ್ಳುವಂತೆ ಬೇರೆ ಮಾಡಿದ್ದ.

'ಆಹಾ' ಆ - ಆನಂದವನ್ನು ಏನೆಂದು ಹೇಳಲಿ. ಭರತನಾಟ್ಯ ಮಾಡಲೆ? ಕಂಸಾಳೆ ಕುಣಿಯಲೆ? ಕಣ್ಣೀರು ಕೆನ್ನೆದಾಟಿ ಬಾಯಿಗಿಳಿದು ಬಾಯಿ ಉಪ್ಪುಪ್ಪಾಗುತ್ತಿತ್ತು.

ಈ ಶಿಕ್ಷೆಯನ್ನು ಅನುಭವಿಸಿದ ನಂತರವಾದರೂ ಕ್ರಾಪು ದೇವಾನಂದ ರಾಜಕಪೂರ್‌ರದಾಗಿರುತ್ತಿತ್ತೆ?! 'ಥೂ' ಇಲಿ ಕಡಿದು ತಿಂದ ಹಾಗಿರುತ್ತಿತ್ತು.

ತಲೆಯ ಚಿಕ್ಕ ಚಿಕ್ಕ ರೋಮಗಳು ನಿಮಿರಿ ನಿಂತು ತಲೆಯ ಬಚ್ಚಲು ತೊಳೆಯುವ ಹಳೆಯದಾದ ಕೂದಲುದುರಿದ ಬ್ರಶ್ಶನ್ನು ನೆನಪಿಸುತ್ತಿತ್ತು.

ಇದು ಅಪರಿಹಾರ್ಯವೆ? ಎಷ್ಟು ದಿನ ಈ ಯಾತನೆ? ಮಾನಸಿಕ ಕ್ಷೋಭೆ -

'ಛೆ' ಎಂಥಹ ಬಾಳು ನನ್ನದು?! ತಂದೆ ಎಂಬ ಅಗ್ನಿ ಸಂಭವನೆದುರು ನಿಲ್ಲಲಾರದೆ ಮನಸ್ಸು ಉದ್ವಿಗ್ನಗೊಂಡಿತ್ತು.

''ಬದುಕಿದೆ'' ಎನಿಸಿತು - ನನ್ನ ಅಜ್ಜ ತಾತ ಊರಿಗೆ ಬಂದಾಗ ಅವರು ನನ್ನ ತಾಯಿಯವರ ಮಾತಾ ಪಿತೃಗಳು. ನನ್ನನ್ನು ಕರೆದುಕೊಂಡು ಹೋಗಲು ಬಂದಿದ್ದರು ಬೇಸಿಗೆಯ ರಜೆ ಪ್ರಾರಂಭವಾಗಿತ್ತು. ತಲೆಯ ಫಸಲು ಕೊಯ್ಲಿಗೆ ಬಂದಿತ್ತು.

ಈ ಬಾರಿ ''ತಲೆದಂಡ'' ತಾತನ ಮನೆಯಲ್ಲಿ ಸಂತಸಗೊಂಡೆ. ಮತ್ತೊಮ್ಮೆ ದೇವಾನಂದ ರಾಜಕಪೂರರ ಕನಸು ಕಂಡೆ.

''ಏ-ಮೆರೆ-ದಿಲ್‌ಕಹೀ -ಔರ್ ಚಲ್''ಎಂದು ಹಾಡಿತ್ತು ಮನ! ತಾತನೂರಿಗೆ ಬಂದಾಗಿತ್ತು. ''ಅಜ್ಜಾ ನಾನು ಚೌರಾನ ಷಾಪಿನಾಗೆ ಮಾಡಿಸ್ಕೊತೀನಿ'' ಎಂದೆ

''ಹಂಗೇ ಮಾಡು ತಮಾ'' ಎಂದು ಆಶ್ವಾಸನೆ ಇತ್ತರು ತಾತ! ಆತನ ಜತೆ ಷಾಪಿಗೆ ಹೋದೆ ಕ್ಷೌರಿಕ ಸುಂಕಪ್ಪನ ಅಪ್ಪ. ಸುಂಕಪ್ಪನಿಗೆ ಎರಡು ಹಲ್ಲು ಬಿದ್ದಿದ್ದರೆ ಈತನ ಬಾಯಲ್ಲಿ ಹಲ್ಲೇ ಇರಲಿಲ್ಲ. ಹಾಗಾದರೆ ಇವನ ಮೆಶೀನಿನ ಹಲ್ಲುಗಳು?! ಯಾಕೋ! ಎದೆ ಹೊಡೆದುಕೊಂಡಿತು.

ಕತ್ತಿನ ಹಿಂದಿನ ಕೂದಲಿನ ಕೊಲೆಯ ಯಾತನೆ ನೆನದು ನಡುಗಿತು ಮೈ. ಈ ರಾಕ್ಷಸನ ಹೆಸರು 'ಬೂಸಿ'

ಫ್ರೆಂಚ್‌ಕ್ರಾಂತಿಯ 'ಗಿಲೋಟಿನ್' ಮೆಶೀನು ಕ್ರಾಂತಿಕಾರಿ ''ರಾಬಿಸ್‌ಪಿಯರ್'' ಕಣ್ಣ ಮುಂದೆ ಹಾದುಹೋದರು.

''ಬೂಸಿ ನಮ್ಮ ಹುಡುಗನಿಗೆ ಚಲೋತನಾಗಿ ಮಾಡು'' ಎಂದು ನಯವಾಗಿ ಸೂಚಿಸಿದ್ದರು ತಾತ!

ಇದರ ಅರ್ಥ ನನಗೆ ನಂತರವೇ ತಿಳಿದದ್ದು. From boiling kettle to frying pan ಆಗಿತ್ತು ನನ್ನ ಸ್ಥಿತಿ. ಕುರ್ಚಿಯ ತೋಳುಗಳಿಗೆ ಅಡ್ಡಲಾಗಿ ಒಂದು ಹಲಗೆಯನ್ನಿಟ್ಟು ಅದರ ಮೇಲೆ ನನ್ನನ್ನು ಕೂರಿಸಿದರು - ಕನ್ನಡಿಗೆದುರಾಗಿ.

ಇದೊಂದು - ಇದುವರೆಗಿಲ್ಲದ ಸೌಲಭ್ಯ. ನನ್ನ ವದನಾರವಿಂದವನ್ನು during the process of execution ನೋಡಿಕೊಳ್ಳಬಹುದಾಗಿತ್ತು.

ನನ್ನ ಕಿವಿಗಳ ಮೇಲು ತುದಿಗಳನ್ನು ಆಧಾರವಾಗಿಟ್ಟುಕೊಂಡು ಅವುಗಳ ನೇರದಲ್ಲಿ ತಲೆಯ ಸುತ್ತಲೂ ಒಂದು ಕಾಲು ದಾರಿಯನ್ನು ಕತ್ತರಿಯಿಂದ ನಿರ್ಮಿಸಿದ ಬೂಸಿ. ಆ ಕಾಲುದಾರಿಯೇ ಬೌಂಡರಿ ಬೇಲಿ. ಬೇಲಿಯ ಕೆಳಭಾಗದ ಕೂದಲುಗಳನ್ನು ನೀರಲ್ಲಿ ನೆನಸಿ - ತನ್ನ ಮೊಂಡುಗತ್ತಿಯಿಂದ ಹೆರೆದೇಬಿಟ್ಟ

ಕಠಾರಿ ವೀರ ವೃದ್ಧ ಬೂಸಿ. ಅಲ್ಲಲ್ಲಿ ರಕ್ತ ಜಿನುಗಿದರೆ ಏನಂತೆ. ತಲೆ ಅವನದಲ್ಲವಲ್ಲ.

ನಂತರ ಹಿಂದಿನಂತೆ ನೂಲಿನ ವಸ್ತ್ರೋಪಚಾರ ಕುತ್ತಿಗೆಗೆ ಮುಂದಿನದು ಶಿಲಾಸೇವೆ ನೀರಲ್ಲಿ ಅದ್ದಿ ಪಟಿಕದ ಹರಳಿನಿಂದ ಕತ್ತನ್ನು ನೇವರಿಸಿದ. ಅದೇ ಉರಿ ಅದೇ ಬಾಧೆ ಸಂಕಟ.

ಅಷ್ಟಕ್ಕೆ ಮುಗಿಯಿತೆ ಇಲ್ಲ. ಕಾಲು ದಾರಿಯ ಮೇಲು ಭಾಗದ ಕೂದಲ ಗಾವಲ ಬಯಲನ್ನು Mowing ಮಾಡಬೇಕಲ್ಲ?

ಮೆಶೀನೆಂಬ ಮುಂದಿನ ಹಲ್ಲುಗಳಿಲ್ಲದ ಒಂಟೆಗೆ ಮೇಯಲು ಬಿಟ್ಟ ನನ್ನ ತಲೆ ಎಂಬ ಹುಲ್ಲು ಗಾವಲನ್ನು ಫಲಶ್ರುತಿ ತನ್ನ ತಲೆ ಅಲ್ಲಲ್ಲಿ ಎತ್ತರದ ಹುಲ್ಲಿನ ನಡು ಗಡ್ಡೆಗಳನ್ನು ಉಳಿಸಿ ಬೋಳಿಸಿದ ಟರ್ಫ್ ಆಗಿತ್ತು.

''ಮೇರ - ಸುಂದರ- ಸಪನಾ - ಬೀತ್‌ಗಯಾ'' ಎಂದು ಹಾಡಿಕೊಂಡು ಮೌನ ರೋದನದಿಂದ ಹೊರಬಿದ್ದಿದ್ದೆ.

★★★

ವರುಷಗಳುರುಳಿದವು. ಹೈಸ್ಕೂಲು ಕಟ್ಟೆ ಹತ್ತಿಯಾಗಿತ್ತು ಕ್ರಾಂತಿಯ ಕಿಡಿ ಹೊತ್ತಿಕೊಂಡಿತು. ಹೊಗೆಯಾಡಿತು. ಸ್ನೇಹಿತರೆದುರು ತೋಡಿಕೊಂಡೆ. ನನ್ನ ಮುಂದುವರಿದ ಸ್ನೇಹಿತರೆಂದರು

''ಚೌರ ಮಾಡಿಸಿಕೊಂಡರೆ ಮಾಡರ್ನ್ ಹೇರ್ ಕಟಿಂಗ್ ಸಲೂನ್ನಾಗೆ ಮಾಡಿಸ್ಕೋಬೇಕಲೇ. ಅದೂ ಪುಲ್ಲಯ್ಯನ ಕಯ್ಯಾಗೆ! ಅವನು ಮುಟ್ಟಿದರೆ ಸಾಕು ಮೆಶೀನು ಆಡೋದೇ ತಿಳಿಯಾಂಗಿಲ್ಲ'' ಒಬ್ಬನೆಂದ.

''ಪುಲ್ಲಯ್ಯ ಬಾಂಬೆದಾಗೆ ಇದ್ನಂತೆ ದೇವಾನಂದ ರಾಜಕಪೂರ್ ಜಾನಿವಾಕರ್ ದಿಲೀಪ್‌ಕುಮಾರ್ ಇಂಥವರಿಗೆಲ್ಲಾ ಹಜಾಮತಿ ಮಾಡಿದ್ನಂತೆ' ಇನ್ನೊಬ್ಬನೆಂದ.

ಇಲ್ಯಾಕ ಬಂದ ಮತ?'' ಕೇಳಿದ ಮತ್ತೊಬ್ಬ.

''ಅವರಪ್ಪಗ ಜಡ್ಡಾತೂಂತ ಬಂದನಂತೆ ಆಮ್ಯಾಲ ಹೋಗೇ ಇಲ್ಲ'' ಮೊದಲಿನವನೆಂದ.

ನನ್ನ ಮನಸ್ಸು ಪುಲ್ಲಯ್ಯನಿಗೆ ಸೋತ್ತಿತ್ತು. ಛೇ- ಪುಲ್ಲಯ್ಯನ ಕೈಲಿ ಕ್ಷೌರ ಮಾಡಿಸಿಕೊಳ್ಳದ ಬಾಳು ಏನು ಬಾಳು ನಿಷ್ಪ್ರಯೋಜನ ಎನಿಸಿತು.

ಎಷ್ಟು ದಿನ ದಬ್ಬಾಳಿಕೆ ಬಂಡಾಯವೇಳಲೇಬೇಕು.

ಒಂದು ಭಾನುವಾರ ಬೆಳಿಗ್ಗೆ ಅಷ್ಟು ಹೊತ್ತಿಗೇ ಎದ್ದೆ. ಹೇಳದೇ ಮನೆಬಿಟ್ಟು

ಹೋದೆ. ತಲೆಯನ್ನು ಪೂರಾ ಬೋಳಿಸಿಕೊಂಡು ನಾಲ್ಕೇ ಕೂದಲು ಪಿಳಿಜುಟ್ಟು ಬಿಟ್ಟುಕೊಂಡು ಬಂದು ಬಾಗಿಲಲ್ಲಿ ನಿಂತೆ.

ತೀರ್ಥರೂಪರಿಂದ ಸ್ವಾಗತ

''ಇದೇನೋ ಇದು - ಭ್ರಷ್ಟ ಸೋಳೀಮಗನ ನೋಡು ಬಾರೇ ಇಲ್ಲಿ. ನಾನು ಜೀವಂತ ಇದ್ದ ಹಂಗೇ ತಲೀ ಬೋಳಿಸಿಕೊಂಡು ಬಾಗಲ್ದಾಗೆ ನಿಂತಾನೆ ಬೋಳಿಮಗನ್ನ ತಂದು''

ಮಿಂಚು-ಗಡುಗು-ಸಿಡಿಲುಗಳು ಎರಗಿದವು. ನಾನು ಮಳೆಗರೆದೆ. ಕೆರೆ ಕೋಡಿ ಬಿದ್ದು ಹರಿದಿತ್ತು. ಕೆಟ್ಟ ಧೈರ್ಯ ಬಂದಿತ್ತು.

''ಸುಂಕಪ್ಪನ್ನ ಬಿಡಿಸು - ನನ್ನ ಷಾಪಿಗೆ ಕಳಿಸು ಪುಲ್ಲಯ್ಯನ ಷಾಪಿಗೆ ಇಲ್ದಿದ್ರೆ ಮುಂದಿನ ತಿಂಗಳು ಹಿಂಗೇನೆ'' ಎಂದೆ.

''ಯತ್ಲಾಗಾರಾ ಹಾಳಾಗಿ ಹೋಗ್ರಿ-ಕಲಿಕಾಲ ನಂಗೇನು ಬೇಕಾಗೇದS'' ಎಂದವರೇ ತಂದೆಯವರು ಎದ್ದು ಹೋದರು

ಮುಂದೆ ನನ್ನ ತಲೆಯ ತಂಟೆಗೆ ಬರಲಿಲ್ಲ.

★★★

ಮದುವೆಯಾಗಿತ್ತು ಮೊದಲ ಬಾರಿಗೆ ಮಾವನವರ ಹಳ್ಳಿಗೆ ಹೋಗಿದ್ದೆ. ಅಂದು ಬೆಳಿಗ್ಗೆ ಜಗಲಿಯ ಮೇಲೆ ಕುಳಿತಿದ್ದೆ. ಮಾನವವರಿಗೆ ಆಯುಷ್ಕರ್ಮ ಮುಗಿತಿತ್ತು. ನನ್ನ ಕಡೆ ನೋಡಿ.

''ನಿಮ್ಮದೂ ಆಗಲಿ'' ಎಂದರು.

ನನಗೆ ದಿಗಿಲಾಯಿತು. ಹಳೆಯ ನೆನಪು ಮರುಕಳಿಸಿತು.

''ಛೇ! ಛೇ! ಬೇಡ'' ಎಂದು ತಲೆ ನೇವರಿಸಿಕೊಂಡೆ.

''ಕಾಸೇನೂ ಕೊಡಬೇಕಾಗಿಲ್ಲ ಅವನಿಗೆ ವರ್ಷಕ್ಕೆ ಭತ್ತ ಅಳೀತೀವಿ ಎಷ್ಟು ಜನ ಇದ್ರೂ, ಬಿಟ್ಟೀ ಕೆರೆಯಬೇಕು'' ಎಂದರು ಮಾವನವರು.

''ಬೇಡಾಂದ್ರೆ ಬೇಡಾ'' ಎಂದು ಜಾಗ ಖಾಲಿ ಮಾಡಿದ್ದೆ

★★★

ಕಳೆದ ದಿನಗಳ ನೆನಪು ಮಂದಹಾಸ ಮೂಡಿಸಿತ್ತು. ಮನ ನೆನಪಿನಾರಣ್ಯದಲ್ಲಿ ವಿಹರಿಸುತ್ತಿತ್ತು.

''ಸಾರ್ ನಿಮ್ಮದೇ ಸರ್ತಿ'' ಎಂದು ಸೆಲೂನಿನವರು ಕರೆದಾಗ ಕನಸಿನಿಂದ ಎಚ್ಚರಗೊಂಡು ನನ್ನ ಕುರ್ಚಿಯ ಕಡೆ ನಡೆದಿದ್ದೆ.

ಪೋಟೋ ಕಿಟ್ಟ

- ನಾಡಾಡಿ

ಪೋಟೋ ಕಿಟ್ಟನ ಕತೆ ಗೊತ್ತುಂಟ?
ಕೇಳ್ರಪ್ಪೋ ಜನ ಕೂತು
ಪೋಟೋ ತೆಗಿಯಾಕ ಬರದಿದ್ರೂನು
ಪೋಟೋ ಉಚ್ಚನ ಮಾತು

ಬಜನೆ ಬಾಷಣ ಯೋನೇ ಇರಲಿ
ಅಲ್ಲಿ ಕಿಟ್ಟ ಹಾಜರ
ಪೋಟೋ ತೆಗೆಯೋ ಟೇಮಿನಾಗೆ
ಇಣುಕಿ ನೋಡತಾನೆ ಹುಷಾರ

ಮಂತ್ರಿಗೋಳ್ನ ಊರಿಗ ಕರಸ್ತಾನೆ
ಸಾಹಿತಿಗಳ್ನೂ ಬಿಡುವೊಲ್ಲ
ಅವರಿಗೆ ಇವರೇ ಅರಾಅಕಿ
ಟೂಡಿಯೋದೋರ್ನ ಮರೆಯೋಲ್ಲ

ತಾನೇ ಕೂತು ವರದಿ ಬರೆದು
ಅದರ ಜೊತ್ಯಾಗಿಟ್ಟು ಪೋಟೋ
ಎಲ್ಲ ಪ್ಯಾಪರಗೂ ಕಳಸ ಬುಡ್ತಾನೆ
ಕೈಯಿಂದ ಕಾಸ ಕೊಟ್ಟು.

ಪೋಟೋ ಪ್ಯಾಪರ್‌ನಾಗ್ ಬಂತು ಅಂದ್ರೆ
ಕಿಟ್ಟನ ಮೊಕದಾಗ ಚಂದ್ರ
ಆ ದಿನವೆಲ್ಲ ತಿರುಗಾಡತಾನೆ
ಊರ ಬೀದೀಲಿ ಈ ಇಂದ್ರ

ಮೊನ್ನೆ ಪಾಪ ಕಿಟ್ಟ ಒಂಟೋದ
ಟೂಡಿಯೋರೋರೆಲ್ಲ ಅತ್ರು
''ಕಾಯಂ ಗಿರಾಕಿ ಒಂಟೋದ್ನಲ್ಲ
ಅನಾತರಾಗಬುಟ್ವಿ ಅಂದ್ರು

ಪೇಪರನಾಗೆ ಸುದ್ದಿ ಬಂತು
ಹೆಣ ಇರಬೇಕಾದ್ರೇನೆ
ಸುದ್ದಿ ಪಕ್ಕದಾಗೇನೆ ಕಿಟ್ಟನ ಪೋಟೋ
ಕಿಟ್ಟ ಟೈಲಿಂದ ನಗತಾ ಅವ್ನೆ

'ಪೋಟೋ ಬಂದದೆ' ಅಂದ್ರು ಯಾರೋ
ಚಟ್ಟದ ಮೇಲೆ ಹೆಣಾನ ಇಡಬೇಕಾದ್ರೆ
ತಟ್ಟನೆ ಹೆಣ ಕೂತ್ಕೊಂಡಬುಡ್ತು
ಹೇಳ್ತು ''ಪೇಪರ್ ತಾರೋ''

ಫೋನಿನಲ್ಲಿ

ಹಲೋ.... ಮೇಡಂ
ನಿನ್ನೆ ನನ್ನ ಕನಸಿನಲ್ಲಿ
ಕಂಡಿದ್ದ ನಿಮ್ಮನ್ನು ಮೇಡಂ
"Hope you behaved well"
ನನ್ನ ಮಟ್ಟಿಗೆ ಹೇಳೋದಾದ್ರ
ನಾನು ಸಭ್ಯತೆಯನ್ನು ಮೀರಲಿಲ್ಲ ಮೇಡಂ
"O...O...O..... hell
ಏನು ಹಾಗಂದ್ರ... ಶ್ಯಾಂ"
ನಾನು ಮಾತ್ರ ಮೀರಲಿಲ್ಲ ಮೇಡಂ
"Shut up you dam..."

–ಹೆಚ್.ವಿ. ವೆಂಕಟಸುಬ್ಬಯ್ಯ

''ಲೌ'' ಅಂದರೆ ''ಭೌ'' ಅನ್ನದಿರಿ!

- ಎನ್. ಪ್ರಭಾಕರ್

''ರ್ರೀ ಪಿಂಕಿನ ಸೂಕ್ಷ್ಮವಾಗಿ ಗಮನಿಸಿದ್ದೀರಾ?''

''ನನ್ನ ಇಡೀ ಆಯುಷ್ಯ ನಿನ್ನ ಗಮನಿಸುವುದರಲ್ಲೇ ಕಳೆದೆ. ಪಿಂಕಿಯನ್ನು ಹೇಗೆ ಗಮನಿಸಲಿ, ಟೈಂ ತಾನೇ ಎಲ್ಲಿದೆ?''

''ವಿಷಯ ಸೀರಿಯೆಸ್ ರ್ರಿ. ಅವಳು ಅಕ್ಕನ ತರಹ ಗಂಭೀರ ಸ್ವಭಾವದವಳಲ್ಲ. ಈಚೀಚೆಗೆ ಅವಳು ಮೊದಲಿನ ತರಹ ಇಲ್ಲ. ಯಾವಾಗ್ಲೂ ಏನೋ ಯೋಚಿಸುತ್ತಿರುತ್ತಾಳೆ. ಊಟ, ನಿದ್ದೆ, ಟಿವಿ ಬಗ್ಗೆ ಮೊದಲಿನಷ್ಟು ಗಮನವಿಲ್ಲ. ಒಂದು ಥರಾ ಮಂಕಾಗಿರ್‍ತಾಳೆ.''

''ಯಾವುದಾದ್ರೂ ಸ್ಪೆಷಲಿಸ್ಟ್‌ಗೆ ತೋರಿಸೋಣವ?''

''ಗಂಡಸರ ಹಣೆಬರಹವೇ ಇಷ್ಟು. ಸುಳಿವು-ಸೂಕ್ಷ್ಮ ಒಂದೂ ಅರ್ಥವಾಗೋಲ್ಲ. ವಯಸ್ಸಿಗೆ ಬಂದ ಹುಡುಗಿ. ನನಗೆ ಸೂಕ್ಷ್ಮವಾಗಿ ಅನ್ನಿಸುತ್ತೆ, ಅವಳು ಯಾರನ್ನಾದರೂ ಪ್ರೀತಿಸುತ್ತಿರಬಹುದು ಅಂತ.''

''ಅಂದರೆ ಲೌ ಮಾಡ್ತಿದ್ದಾಳೆ ಅಂತಲಾ?''

''ನಂಗೂ ಅದೇ ಸಂಶಯ ರ್ರೀ''

''ಶಭಾಷ್, ಭಲೆ ಪಿಂಕಿ''

''ಎಂಥ ತಂದೆ ನೀವು? ಮಗಳು ಲೌ ಮಾಡ್ತಿದ್ದಾಳೆಂದು ತಿಳಿದು ಉಗಿಬೇಕು ಇಲ್ಲ ಉಪಾಯವಾಗಿ ಬುದ್ದಿ ಹೇಳಬೇಕು. ಎಲ್ಲ ಬಿಟ್ಟು ಭಲೆ ಅನ್ನುತ್ತಾ ಉಬ್ಬತಾ ಇದ್ದೀರಲ್ಲ.''

''ಅವಳು ಲೌ ಮಾಡ್ಲಿಕಣೆ, ಪ್ರೀತಿಸೋದು ತಪ್ಪಲ್ಲ, ಪ್ರೇಮ ಅಮರ. ಅದಕ್ಕೇ ಅವಳ ಬೆನ್ನುತಟ್ಟಿ ಪ್ರೋತ್ಸಾಹಿಸಿ, ತಾನು ಮೆಚ್ಚಿದ, ಪ್ರೀತಿಸಿದ ಹುಡುಗನಿಗೇ ಪಿಂಕಿಯನ್ನು ಕೊಟ್ಟು ಮದುವೆ ಮಾಡಿ ಹರಸಿ ಆಶೀರ್ವದಿಸುತ್ತೇನೆ.''

''ಏನ್ರಿ ಇದು ಹುಚ್ಚು-ಹುಚ್ಚಾಗಿ?''


''ಹುಚ್ಚು ಅಲ್ಲ, ಬೆಪ್ಪು ಅಲ್ಲ. ಅವಳ ಅಕ್ಕ ಜಲಜಳ ಮದುವೆಗೆ ಎಷ್ಟು ಖರ್ಚಾಯ್ತು ಹೇಳು?''

''ಹತ್ ಹತ್ರ ನಾಲ್ಕು ಲಕ್ಷ ಆಯ್ತಲ್ಲರಿ. ಪಿಂಕಿ ಲೌಗೂ ಜಲಜಳ ಮದುವೆ ಖರ್ಚಿಗೂ ಯಾವ ಸಂಬಂಧ?''

''ಅಲ್ಲೇ ಇರೋದು. ಪಿಂಕಿಯ ಪ್ರೇಮ ಆಳವಾದಷ್ಟೂ ನನಗೆ ಖರ್ಚು ಕಡಿಮೆ. ಅವಳನ್ನು ಗಾಢವಾಗಿ ಪ್ರೀತಿಸುವ ಹುಡುಗ ಅನ್ನ, ನೀರು, ಸಂಬಂಧ ಎಲ್ಲವನ್ನು ತ್ಯಜಿಸಿದರೂ ಪಿಂಕಿಯನ್ನು ಬಿಡಲಾರ. ತನಗೆ ಹಣ, ಅಂತಸ್ತು, ಅದ್ದೂರಿ ಮದುವೆ ಮುಖ್ಯವಲ್ಲ, ಕೇವಲ ಪಿಂಕಿ ತನ್ನವಳಾದರೆ ಸಾಕು ಅನ್ನುತ್ತಾನೆ. ಅನಾಯಾಸವಾಗಿ ಮದುವೆ ಖರ್ಚು ಉಳಿಯುತ್ತೆ. ದೇವಸ್ಥಾನದಲ್ಲಿ ತಾಳಿ ಕಟ್ಟುವುದಕ್ಕೂ ಸೈ! ಜಲಜಳಿಗೆ ನೋಡು, ಸುಮಾರು ಇಪ್ಪತ್-ಇಪ್ಪತ್ತೈದು ಗಂಡು ತೋರಿಸಿದೆವು. ಇವಳಿಗೆ ಹಾಗಲ್ಲ. ಲಗ್ನಪತ್ರಿಕೆ, ಶಾಸ್ತ್ರ, ವರಪೂಜೆ, ಧಾರೆ, ನಾಗೋಲಿಗಳ ಅವಾಂತರವಿಲ್ಲ ಪಿಂಕಿ ಮದುವೆ ಒಂದು ಪೈಸೆಯ ಖರ್ಚಿಲ್ಲದೆ ಹೂವೆತ್ತಿದಂತೆ ಆಗುತ್ತೆ, ಅಚಲವಾಗಿ ಪಿಂಕಿ ಒಬ್ಬ ಹುಡುಗನನ್ನು ಪ್ರೀತಿಸಿದ್ದೇ ಆದರೆ. ಅದಕ್ಕೇ ನಾನು ಪಿಂಕಿಯನ್ನು ಭಲೆ ಅಂದಿದ್ದು.''

''ಅಲ್ಲಾರಿ...''

''ಸಂಸಾರ ರಥದ ಇನ್ನೊಂದು ಮುಖ್ಯ ಸತ್ಯ ಇಲ್ಲಿ ಅಡಗಿದೆ ಕಣೆ! ಪಿಂಕಿ ತಾನು ಪ್ರೀತಿಸಿದ ಹುಡುಗನನ್ನು ಮದುವೆ ಆದಳು ಅಂತ ಇಟ್ಕೊ. ಅವರ ಸಂಸಾರದಲ್ಲಿ ಎಂದೂ ಜಗಳವೇ ಇರೋಲ್ಲ. ನಾನು ನೀನು ಇಷ್ಟು ವರ್ಷವಾದರೂ ಸಂಸಾರದಲ್ಲಿ ಇನ್ನೂ ಆಗಾಗ್ಗೆ ಜಗಳವಾಡುತ್ತಲೇ ಇರುತ್ತೇವೆ. ಪಿಂಕಿಯ ಪ್ರೇಮ ಸಂಸಾರದಲ್ಲಿ ಹೀಗಾಗೋಲ್ಲ ಯಾಕೆಂದರೆ ಪ್ರೀತಿಸಿ ಮದುವೆಯಾದ ಹುಡುಗತಾನೇ ಜೀವನದ ಉದ್ದಕ್ಕೂ ಅವಳು ಹೇಳಿದ ಹಾಗೇ ಕೇಳಿಕೊಂಡು ಬಿದ್ದಿರ್‍ತಾನೆ''



'ಸದ್ಯ, ಆದಾಯ ತೆರಿಗೆಯವರಿಗೆ ಗೊತ್ತಾಗದಿದ್ರೆ ಸಾಕು, ಅದನ್ನೂ ಗೂಢಚರ್ಯೆಗೆ ಹೆಚ್ಚಿಬಿಟ್ಟಾರು''

ಹೆ.ಹೊ.ಸ.

– ಸಿ.ಆರ್. ಸತ್ಯ

ಹೆ.ಹೊ.ಸ.ದ ವಾರ್ಷಿಕೋತ್ಸವಕ್ಕೆ ಮೊನ್ನೆ ನಾನೂ ಹೋಗಿದ್ದೆ. ಎಲ್ಲೀ ಅಂದ್ರಾ? ಬೆಂಗಳೂರಿನಲ್ಲಿ - ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ; ನಂಬುತ್ತೀರೋ ಬಿಡುತ್ತೀರೋ ಸ್ಟೇಡಿಯಂನಲ್ಲಿ ಕೂರೋದಿರಲಿ, ನಿಂತ್ಕೊಳ್ಳೊಕ್ಕೂ ಜಾಗ ಇರಲಿಲ್ಲ. ಈ ಮಧ್ಯೆ ಎಷ್ಟೋ ಜನ ವೀಲ್‌ಚೇರ್‌ಗಳಲ್ಲಿ ಕೂತಿದ್ರು. ಇನ್ನಷ್ಟು ಜನ ಸ್ಟ್ರೆಚರ್ ಕೇಸಸ್ ಬೇರೆ. ಕೆಲವರು ಕೈ ಕಾಲಿಗೆ ಫ್ರೆಶ್ ಆಗಿ ಪ್ಲಾಸ್ಟರ್ ಹಾಕಿಸಿಕೊಂಡು ಬಂದಿದ್ರು. ಇನ್ನೊಂದು ಪ್ರಾಣಿ - ಪಾಸ್ಟ್ ಪ್ರೆಸಿಡೆಂಟ್ ಆಫ್ ಹೆ.ಹೊ.ಸ. ಅಂತೆ - ವೀಲ್ ಚೇರ್‌ನಲ್ಲಿ ಕೂತಿದ್ದಲ್ಲದೇ ಜೊತೆಗೆ ಡ್ರಿಪ್‌ಬೇರೇ ತೊಗೋತಿದ್ರು. ನನಗೂನೂ ಕಾಲಿಗೇ ಏಟು ಬಿದ್ದಿದ್ದರಿಂದ ಕುಂಟ್ಕೊಂಡೇ ಹೋದೆ. ಯಾರೋ ಕರುಣೆ ತೋರಿಸಿ ಜಾಗ ಮಾಡ್ಕೊಟ್ರು. ಕೂತೆ. ಎಲ್ಲೋ VIP ಮೆಂಬರುಗಳು ಇದ್ರು ಅಂತ ಕಾಣುತ್ತೆ - ಒಂದೆರಡು ಆಂಬ್ಯುಲೆನ್ಸ್‌ಗಳೂ, ಮೇಲ್ ನರ್ಸ್‌ಗಳೂ ನಿಂತಿದ್ದರು.

ಸಮಾರಂಭ ಪ್ರಾರ್ಥನೆಯೊಂದಿಗೆ ಶುರುವಾಯ್ತು. ಪ್ರಾರ್ಥನೆ ಮಾಡೋನು - ತಲೆಗೆಲ್ಲಾ ಬ್ಯಾಂಡೇಜ್ ಇದ್ದಿದ್ದರಿಂದ ಯಾರೂಂತ ಗೊತ್ತಾಗಲಿಲ್ಲ - by mistake ''ಕಾಯೌಶ್ರೀ ಗೌರೀ''... ಅಂತ ಶುರು ಮಾಡಿ, ನಾಲಿಗೆ ಕಚ್ಚಿಕೊಂಡು, ನಂತರ, ಶಿವಪ್ಪ ಕಾಯೋ ತಂದೆ, ಮೂರು ಲೋಕ ಸ್ವಾಮಿ ದೇವಾ'' ಅಂತ ಭಾವನಾ ಪೂರಕವಾಗಿ ಹಾಡಿ ಎಲ್ಲರ ಕಣ್ಣಲ್ಲೂ ನೀರೇ ತರಿಸಿಬಿಟ್ಟ.

ಇದಾದ ನಂತರ ಹೆ.ಹೊ.ಸ.ದ ಸೆಕ್ರೆಟರಿ ಎಲ್ಲರನ್ನೂ ಸ್ವಾಗತಿಸಿ ಹೆ.ಹೊ.ಸ. ಒಂದು ವರುಷದಲ್ಲಿ ಅಮೋಘವಾಗಿ ಬೆಳೆದಿದೆ, ಸದಸ್ಯತ್ವ ಕೇವಲ ಒಂದರಿಂದ ಐವತ್ತು ಸಾವಿರಕ್ಕೂ ಮೇಲೇರಿದೆ (ಅದೂ ಬೆಂಗಳೂರ chapter ನಲ್ಲೇ!). ಇದೇ ಪ್ರಗತಿಯಲ್ಲಿ ನಡೆದರೆ ಹೆ.ಹೊ.ಸ.ಕ್ಕೆ ಭಾರತ ದೇಶದ ಪ್ರತಿಯೊಬ್ಬ ಗಂಡು ಪ್ರಜೆಯೂ ಒಂದಲ್ಲಾ ಒಂದು ದಿನ ಸದಸ್ಯನಾಗೋದರಲ್ಲಿ ಸಂಶಯವೇ ಇಲ್ಲಾ ಅಂತ ಘೋಷಿಸಿದಾಗ ನಾವೆಲ್ಲಾ ಚಪ್ಪಾಳೆ ಹೊಡೆದೆವು. ಆಮೇಲೆ ಸೆಕ್ರಟರಿ ಮುಖ್ಯ ಅತಿಥಿಯ ಕಡೆ ತಿರುಗಿ ''ಇಂದು ನಮ್ಮ ಚಿರಪರಿಚಿತ ಸಾಹಸಿ, ಸಾಹಿತಿ ಭೀಮಸೇನರಾಯರು ಮುಖ್ಯ ಅತಿಥಿಗಳು. ಅವರಿಗೆ ನಮ್ಮೆಲ್ಲರ ಸ್ವಾಗತ ಹಾಗೂ ಕೃತಜ್ಞತೆಗಳು. ನರ್ಸಿಂಗ್ ಹೋಮಿನಿಂದ ಆಂಬ್ಯುಲೆನ್ಸ್‌ನಲ್ಲಿ ಇಲ್ಲೇ ಇದೇ ವೇದಿಕೆಯ ಮೇಲೆ ನೇರವಾಗಿ ಬಂದು ನಮ್ಮೊಡನೆ ಬೆರೆತಿದ್ದಾರೆ. ಅನಸ್ತೀಶಿಯಾ ಎಫೆಕ್ಟು ಇನ್ನೂ ಪೂರ್ತಿಯಾಗಿ ಹೋಗದಿದ್ದರೂ ನಮ್ಮ ಕರೆಗೆ ಓಕೊಟ್ಟು ಈ

ಸಾಹಸ ಮಾಡಿದ್ದಾರೆ. ಅವರು ಹೆಸರಿಗೆ ತಕ್ಕ ಹಾಗೆ ಭೀಮಸೇನರೇ!'' ಅಂತ ಅಂದಾಗ ನಾವೆಲ್ಲಾ ಸ್ಟೇಡಿಯಂ ಬಿದ್ದು ಹೋಗೋ ಹಾಗೆ ಕರತಾಡನ ಮಾಡಿದ್ವಿ.

ಭೀಮಸೇನರಾಯರು ಮೆಲ್ಲನೆ ಎದ್ದು ಕಷ್ಟಪಟ್ಟು ಬ್ಯಾಲೆನ್ಸ್ ಮಾಡುತ್ತಾ ಎಲ್ಲರಿಗೂ ವಂದಿಸಿದರು.

''Excuse me for interruption - ಹೆ.ಹೊ.ಸ. ಅಂತ ಅಂದ್ರೇನು?'' ಅಂತ ಕೇಳಿದ್ರಾ? ಸಾರ್‍ರೀ, ಮೊದಲೇನೇ ಹೇಳಲಿಲ್ಲವೆ? ಹೆಂಡತಿಯರ ಕೈಲಿ ಹೊಡೆಸ್ಕೊಳ್ಳೋರ ಸಂಘ, ವರ್ಷಕ್ಕೆ ಹತ್ತು ರೂಪಾಯಿ ಚಂದಾ ಇಬ್ಬರು ಹೆಂಡ್ತೀರಿದ್ರೆ, concession ಉಂಟು - ಕೇವಲ ಐದೇ ರೂಪಾಯಿ, ನಾನೂ ಈಚೀಚೆಗೆ ಐದು ರೂಪಾಯಿ ಕೊಟ್ಟೇ ಮೆಂಬರಾಗಿದ್ದು (ಹೊಸ ಅಭ್ಯರ್ಥಿಗಳಿಗೆ ಒಂದು Warning! ಮೋಸ ಮಾಡೋಕ್ಕೆ ಹೋಗಬೇಡಿ. ರೇಶನ್‌ಕಾರ್ಡ್‌ನಲ್ಲಿ ಎರಡು ಹೆಂಡತೀರ identities ನೂ prove ಮಾಡ್ಬೇಕಾಗುತ್ತೆ!)

Back to ವಾರ್ಷಿಕೋತ್ಸವ ಭೀಮ ಸೇನರಾಯರು ಬ್ಯಾಲೆನ್ಸ್ ಸಿಕ್ಕಿದ ತಕ್ಷಣ ತಮ್ಮ ಕೋಲು, ಪಂಚೆ, ಬ್ಯಾಂಡೇಜು, ಡ್ರಿಪ್ಪು, ಗಂಟಲು ಇತ್ಯಾದಿಗಳನ್ನು ಎಲ್ಲಾ ಸರಿಮಾಡಿಕೊಂಡು ಭಾಷಣವನ್ನು ಮಾಡಿದರು. ಅವತ್ತಿನ ದಿನ ಫ್ರೆಶ್ ಆಗಿ ಏಟು ತಿಂದಿದ್ದ ಕೆಲವು ಸದಸ್ಯರು ನರಳಾಡೋ ಶಬ್ದ ಬಿಟ್ಟರೆ, ಸ್ಟೇಡಿಯಂನಲ್ಲೆಲ್ಲಾ, Pindrop Silence ಉ! ಅವರ ಸ್ವಾನುಭವದಿಂದ ಹೊರ ಉಕ್ಕಿದ ಮಾತುಗಳಲ್ಲಿ ಅತ್ಯಂತ ನೋವಿತ್ತು. ಅವರ ಇಡೀ ದೇಹ ಅವರ ಸಂಸಾರದ ಯಾತನೆಯ ಒಂದು ಪ್ರತಿಬಿಂಬವೇ ಆಗಿತ್ತು. ಒಂದೇ ಒಂದು ಹೆಂಡತಿ ಕೈಲಿ ಈತ ಹೀಗೆ ಸುಲಿದ ಸೌತೇಕಾಯಿ ಆದರೆ ಇನ್ನೊಂದು ಐದು ಹತ್ತು ವರುಷಗಳಲ್ಲಿ ನನ್ನ ಗತಿ ಹೇಗಿರುತ್ತೋ ಅಂತ ಯೋಚಿಸಿ ಗಾಬರಿಯಾದೆ.

ಯಾತನೆಯಲ್ಲೂ ಭೀಮಸೇನರಾಯರು ವಿಶಾಲ ಹೃದಯ[illegible]ಾಗಿ ಮಿಂಚಿದರು: ''ಯಾರೂ ನಿಮ್ಮ ಹೆಂಡತಿಗೆ ಮರು ಏಟು ಕೊಡಬೇಡಿ. ಜೀವನದಲ್ಲಿ ಅವಳಿಗೇ ಹೊಡೆದೂ ಹೊಡೆದೂ ಸುಸ್ತಾಗಿ ಬೇಜಾರಾಗಲಿ ಒಂದು ದಿನ ಅವಳೇ ನಿಮ್ಮ ಕಾಲಿಗೆ ಬಿದ್ದು ನನ್ನನ್ನ ಹೊಡೀರಿ ಅಂತ ಕೇಳ್ಕೋತಾಳೆ. ಇನ್ನು ಅನೇಕ ಹೆಂಡತಿಯರಿಗೆ ಮೂವತ್ತು ವರ್ಷಕ್ಕೆಲ್ಲಾ ಆರ್ತರೈಟಿಸ್ ಬರೋದು ಖಂಡಿತ. ಆವಾಗ ಅವರಿಗೆ ಒಂದು Spoon ಎತ್ತೊಕ್ಕೂ ಆಗಲ್ಲ. ಅಲ್ಲಿಯತನಕ ಸಹನೆಯಿಂದ ಏಟು ತಿನ್ನಿ. ಮನೆಯಲ್ಲಿ ಫಸ್ಟ್ ಏಡ್ ಬಾಕ್ಸ್ ಇಟ್ಟಿಕೊಂಡಿರಿ. ಮೂರು ತಿಂಗಳಿಗೊಮ್ಮೆ anti ಟೆಟಾನಸ್ ಇಂಜಕ್ಷನ್ ತಗೊಳ್ಳಿ. ಮನೆ ಹತ್ತಿರ ಯಾರಾದರೂ ಆರ್ತೋಪೆಡಿಕ್ ಸರ್ಜನ್ ಇದ್ದರೆ ಅವರನ್ನು ಗುರುತು ಮಾಡಿಕೊಳ್ಳಿ. ಏಟು ಬಿದ್ದರೆ ನಿತ್ರಾಣರಾಗದಿರಿ. ಸಂಸಾರದ ಸತ್ಯ ಇಷ್ಟೆ.

ಸುಖವೆಲ್ಲಾ ಸಿನಿಮಾದಲ್ಲೇ ಮುಂದಿನ ಸಲ ನಿಮ್ಮ ಮೂಳೆಗೆ ಪೆಟ್ಟು ಬಿದ್ದಾಗ ದಾಸರ ಪದವನ್ನು ಜ್ಞಾಪಿಸಿಕೊಳ್ಳಿ, ಈಸಬೇಕು! ಏಳಬೇಕು! ಎದ್ದು ಓಡಬೇಕು!!!''

ಭಾಷಣ ಕೇಳಿ ನಾವೆಲ್ಲಾ ಪುಳಕಿತರಾಗಿ ಮಾಡಿದ ಕರಡಾತನದಿಂದ ಭೀಮಸೇನ ರಾಯರು ಜ್ಞಾನ ತಪ್ಪಿ ಬಿದ್ದಿದ್ದು ಮಾತ್ರವಲ್ಲಾ ಪಕ್ಕದ ಕಬ್ಬನ್ ಪಾರ್ಕ್‌ನಲ್ಲಿರುವ ಮರಗಳಲ್ಲಿ ಗುಡ್‌ನೈಟ್ ಹೇಳಿ ಮಲಗಿದ್ದ ಪಕ್ಷಿಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಆಕಾಶಕ್ಕೆ ಹಾರಿ ಹೋದವು.

ಇದಾದ ನಂತರ ಒಂದು ಹೈಟೆಕ್ Vote of thanks ಆಯ್ತು. ಹತ್ತಿರದ ಬೌರಿಂಗ್ ಆಸ್ಪತ್ರೆಯಲ್ಲಿ ಬೆಳಿಗ್ಗೆ ತಾನೇ ಏಟು ತಿಂದು I.C.U. ನಲ್ಲಿ ಅಡ್ಮಿಟ್ ಆಗಿರೋ ಹೆ.ಹೊ.ಸ.ದ ವೈಸ್ ಪ್ರೆಸಿಡೆಂಟ್ - ಪಾಪ, ಹೆಸರು ಸಂತೋಷ್‌ರಾವ್ ಅಂತ - ವೈರ್‌ಲೆಸ್ ಮೂಲಕ ವಂದನಾರ್ಪಣೆ ಮಾಡಿದ್ರು. ಆಮೇಲೆ ನಾವೆಲ್ಲಾ annual subscription ರಿನ್ಯೂ ಮಾಡಿದ್ವಿ

ಕೊನೆಯದಾಗಿ ನೆರೆದಿದ್ದ ಅಷ್ಟು ಜನಕ್ಕೂ ಬಿಸಿಕಾಳು ಉಸಲಿ ಹಂಚಲಾಯಿತು. (High protein ಆದ್ದರಿಂದ ಗಾಯಗಳು ಬೇಗ ಮಾಯುತ್ತವಂತೆ) ಅದಲ್ಲದೇ ರಿಯಾಯಿತಿ ಬೆಲೆಯಲ್ಲಿ ಮೆಂಬರುಗಳಿಗೆ ಹೆಲ್ಮೆಟ್, ಗಾಗಲ್ಸ್, ಕ್ರಿಕೆಟರ್‌ಗಳು ಹಾಕ್ಕೋಳ್ಳೋ Knee ಕ್ಯಾಪು, ಅಬ್ಡೋಮನ್ ಗಾರ್ಡ್ ಇತ್ಯಾದಿ ರಕ್ಷಣಾ ಸಲಕರಣೆಗಳನ್ನು ಖರೀದಿ ಮಾಡೋಕ್ಕೆ ಅನುಕೂಲ ಮಾಡ್ಕೊಟ್ರಿದ್ರು. ಇನ್ಯಾರೋ ಒಬ್ಬರು ತ್ರೀ ಇನ್ ಒನ್ ಅಂತ ಒಂದು ಬಾಕ್ಸ್ ಮಾರ್‍ತಾ ಇದ್ರು. ಒನಕೆ ಗಾರ್ಡ್, ಸೌಟ್ ಗಾರ್ಡ್ ಮತ್ತು ಕುಕ್ಕರ್ ಲಿಡ್ ಗಾರ್ಡ್ ಮೂರೂನೂ ಒಟ್ಟಿಗೆ ತೊಗೊಂಡ್ರೆ ಬಹಳಾ ಚೀಪ್ ಅಂತೆ.

ಒಟ್ಟಿನಲ್ಲಿ ಅವತ್ತಿನ ಕಾರ್ಯಕ್ರಮ ಚೆನ್ನಾಗಿತ್ತು. ಬಸ್ ಸಿಗದೇ ರಾತ್ರಿ ಮನೆಗೆ ನಡೆದುಕೊಂಡೇ ವಾಪಸ್ ಹೋಗಿ ತಲುಪಿದಾಗ ಹನ್ನೊಂದು ಘಂಟೆ ಸಮಯ. ಎದುರು ಬಾಗಿಲಿನಲ್ಲಿ ನನ್ನ ಇಬ್ಬರು ಹೆಂಡತಿಯರೂ ಕಾಯ್ತಾ ನಿಂತಿದ್ದನ್ನು ದೂರದಿಂದಲೇ ನೋಡಿದೆ. ಒಬ್ಬಳ್ ಕೈಲಿ ಒನಕೆ, ಇನ್ನೊಬ್ಬಳ ಕೈಲಿ ಕುಕ್ಕರ್ ಲಿಡ್ ಇದ್ದಿದ್ದನ್ನೂ ನಾನು ನೋಡಿದೆ.

ತ್ರೀ ಇನ್ ಒನ್ ತೊಗೊಂಡಿದ್ರೆ ಚೆನ್ನಾಗಿರ್‍ತಿತ್ತು ಅಂದ್ಕೊಂಡೆ. ಏನು ಮಾಡೋದು? ಅವರಿಗೆ ಸುಳಿವು ಬೀಳದ ಹಾಗೆ ಪಕ್ಕದ ಮನೆ ಕಡೆಯಿಂದ ಗೋಡೆ ಹಾರಿ ಹಿತ್ತಲ ಬಾಗಿಲಿಗೆ ಹೋಗಿ, ಮಗನ ಸಹಾಯದಿಂದ ಬಾಗಿಲು ತೆಗೆಸಿ, ನೇರ ಬೆಡ್ ರೂಮಿಗೆ ಹೋಗಿ ರಗ್ ಹೊದ್ಕೊಂಡು ಮಲಗೇ ಬಿಟ್ಟೆ!

ಮಾಡಿಫೈಡ್ ದಾಸರ ಪದಗಳು

– ಎಂ.ಎಸ್.ಕೆ.

ನಮ್ಮ ದಾಸರ ಪದಗಳು ಈ ಪ್ರಸಕ್ತ ಯುಗಕ್ಕೆ ಸರಿಯಲ್ಲ, ಅವುಗಳನ್ನು ತುಂಬಾ ಮಾಡಿಫೈ ಮಾಡಬೇಕೆನ್ನುವುದು ನನ್ನ ಅಂಬೋಣ. ಈಗ ಈ ಮೂರು ಹಾಡುಗಳನ್ನು ನೋಡೋಣ;

1. ಎಲ್ಲಾರು ಮಾಡುವುದು ತುತ್ತು ಹಿಟ್ಟಿಗಾಗೀ, ತುಂಡು ಬಟ್ಟೆಗಾಗೀ...

2. ಸತಿ ಮೋಹ ಸುತ ಮೋಹಾ, ಜನನಿ ಜನಕರ ಮೋಹಾ

3. ಕನಕರ 'ಗಂಡಗಂಜದ ನಾರಿ, ಅವಳೆ ಹೆಮ್ಮಾರಿ...'

1. ಈಗ ನಮ್ಮ ತುತ್ತು ಹಿಟ್ಟು, ತುಂಡು ಬಟ್ಟೆ ಪರಿಶೀಲಿಸೋಣ. ಯಾರಾದರೂ ರಾಜಕಾರಿಣಿ ಇದನ್ನು ತನ್ನ Manifesto ದಲ್ಲಿ ಹಾಕಿದರೆ ಅವನಿಗೆ ಅವನ ಹೆಂಡತಿ ಮಕ್ಕಳೂ ಸಹ ಓಟು ಹಾಕೋದಿಲ್ಲಾ, ಇದು ಖಂಡಿತ. ಆಕಾಶ ತೋರಿಸಿ ನಾನು ಗೆದ್ದರೆ ಇಡೀ ಸ್ವರ್ಗಾನೇ ಕೆಳಗಿಳಿಸಿ ಅಲ್ಲಿರೋ ಸೋಮರಸದ ಡ್ರಂಗಳನ್ನು ನಮ್ಮ ಬೀದೀಲಿ ಸುರೀತೀನಿ ಅಂದಾಗ ಮಾತ್ರ ಕೆಲವು ಓಟು ಬೀಳಬಹುದು. ನಮ್ಮ ದಾಸರ ಥರ ತುತ್ತು ಹಿಟ್ಟು, ತುಂಡು ಬಟ್ಟೆ ತೋರಿಸಿದರೆ ಕೈ ತೋರಿಸಿ ಅವಲಕ್ಷಣ ಹೇಳಿಸಿಕೊಂಡಂತಾಗುತ್ತೆ. ಅದಕ್ಕೇ ಈ ಮಾಡಿಫಿಕೇಶನ್ ಬೇಕೇ ಬೇಕು;

''ಎಲ್ಲಾರು ಮಾಡುವುದು ರಾಗಿ ಮುದ್ದೇಗಾಗೀ, ಕೋಳಿ ಸಾರಿಗಾಗಿ, ಮೇಲೆ ನಾಲ್ಕು ಚಮಚ ತುಪ್ಪಕ್ಕಾಗೀ...

Five star ಲಂಚಿಗಾಗೀ, ಡ್ರಾಫ್ಟ್ ಬೀರಿಗಾಗೀ, ಮೇಲೆ ಡೆಸರ್ಟ್‌ಗಾಗೀ, ತ್ರೀ ಪೀಸ್ ಸೂಟಿಗಾಗೀ, ಶೈನಿಂಗ್ ಷೂಸಿಗಾಗೀ, ಸೆಲ್ ಫೋನಿಗಾಗೀ... BMW ಕಾರಿಗಾಗೀ, ಡೈಮಂಡ್ ನೆಕ್ಲೇಸಿಗಾಗೀ, ಭಾರೀ ಸೀರೆಗಾಗೀ....''

2. ಈಗ ದಾಸರ next ಹಾಡು ನೋಡೋಣ; 'ಸತಿ ಮೋಹ, ಸುತ ಮೋಹ ಜನನಿ ಜನಕರ ಮೋಹ;


ಯಾವಕಾಲದ ಮಾತುರೀ ಇದು. ಜನನಿ ಜನಕರು ಯಾರಿಗೆ ಬೇಕ್ರೀ ಈಗ. ಅವರೆಲ್ಲಾ Now consigned to old age homes. ನಮ್ಮ ದಾಸರು ಈ ಹಾಡಿನಲ್ಲಿ ಒಂದು ವೆರಿ important ಮೋಹ miss ಮಾಡಿದ್ದಾರೆ. ಅದು ಗಾದಿ ಅಲಿಅಸ್ ಕುರ್ಚಿ ಮೋಹ. ಈಗಿನ ಪ್ರಜೆ ತನ್ನ ಸತಿ ಸುತ ಜನನಿ ಜನಕ ಎಲ್ಲಾ ಬಿಟ್ಟಾನು,

ಆದರೆ ತನ್ನ ಕುರ್ಚಿ ಮಾತ್ರ ಬಿಡ. 'ಬಿಡೆ ನಿನ್ನ ಪಾದವ' ಅಂತ ತನ್ನ ಕುರ್ಚಿ ಕಾಲನ್ನ ಗಟ್ಟಿಯಾಗಿ ಹಿಡೀತಾನೆ. ಆ ಕುರ್ಚೀ ಹಿಂದಿರೋ ದಾದಾಕಾಲನ್ನೂ ಹಿಡೀತಾನೆ. ಈ ಒಳ ಮರ್ಮ ಅದು ಹೇಗೆ ನಮ್ಮ ದಾಸರು ಮರೆತರೋ ನಾನು ಕಾಣೆ.

ನಮ್ಮ ಪ್ರಧಾನಿ ಅಟಲ್ಜೀಯವರು ಯಾವ ಸತೀ, ಸುತ ಮೋಹವಿಲ್ಲದ ನಿರಾಡಂಬರ ಬ್ರಹ್ಮಚಾರಿ. ವಿರಕ್ತ ರಾಷ್ಟ್ರಕ. ಅವರು ಗಾದಿಗೆ ಬಂದಾಗ 'ಇದೇ ಕೊನೆ. ಇನ್ನಿಲ್ಲಾ. ಮುಂದೆ ಯಾವ elections ಗೂ ನಿಲ್ಲಲ್ಲಾ' ಅಂದೋರು, ಕೇವಲ 10 ತಿಂಗಳಾದಮೇಲೆ ಅಂದ್ರಂತೆ ನನಗೆ ರಾಜಕೀಯದಲ್ಲಿ ಮುಂದುವರಿಯಲು "ಇಚ್ಛಾ ಹೈ" ಅಂತ. ನೋಡಿದಿರಾ ಈ ಗಾದಿಯ ಪ್ರಭಾವ? ಅನುಮಾನ ಸನ್ಯಾಸೀನ ಕೆಡಿಸ್ತಂತೆ. ಇಲ್ಲಿ ಗಾದಿ ನಮ್ಮ ಅಖಂಡ ಬ್ರಹ್ಮಚಾರೀನೇ ಅಲ್ಲಾಡಿಸಿತು.

ಅದಿಕ್ಕೇ ಅಲ್ಲವೇ ನಮ್ಮ ಗೌಡರು ತಮ್ಮ ಭಾಷಣದಲ್ಲಿ "ನಾನು ಮತ್ತೆ ಎದ್ದು ಬಂದು ಈ ಕುರ್ಚಿಯಲ್ಲಿ ಮತ್ತೆ ಕೂಡುತ್ತೇನೇಂತ" ಪ್ರತಿಜ್ಞೆ ಮಾಡಿದ್ದು ಲೋಕ ಸಭೆಯಲ್ಲಿ?

3. ಈಗ ನಮ್ಮ ಕನಕರ "ಅವಳೆ ಹೆಮ್ಮಾರೀ..." ನೋಡೋಣ. ಅಲ್ಲಾ ಸಧ್ಯ ಆ ಕಾಲದಲ್ಲಿ ಅವರು ಹೇಳಿದ್ರಿಂದ ಸರಿಹೋಯ್ತು. ಅವರೇನಾದ್ರೂ ಈಗ ಈ 21st century ಲೀ "ಗಂಡಗಂಜದ ನಾರಿ ಅವಳೆ ಹೆಮ್ಮಾರೀ..." ಅಂತೇನಾದ್ರೂ ರಾಗವಾಗಿ ತಂಬೂರಿ ಮೀಟಿಕೊಂಡು ಹಾಡಿದ್ರೆ ಅವರ ಗತಿ ಜಾಲಾಡಿಸಿಬಿಡ್ತಿದ್ರು ನಮ್ಮ LIB ನೋರು. "ಹೆಣ್ಣಿಗಂಜದ ಗಂಡ ಅವನೆ ಕಡು ಭಂಡಾ...." ಇದು ಇವತ್ತಿಗೆ More Appropriate ಏನಂತೀರಾ ನೀವು?



ಸಿರಿಗನ್ನಡಂ ಗೆಲ್ಗೆ!

- ಸಂಧ್ಯಾ ರಮೇಶ್

''ಏನ್ ಗುರು.... ಅಷ್ಟೊಂದು ಯೋಚನೆ ಮಾಡ್ತಾ ಕೂತಿದೀಯಾ? ಆಕಾಶ ತಲೆ ಮೇಲೆ ಬೀಳೋ ಹಾಗೆ, ಹರಳೆಣ್ಣೆ ಮುಖ ಮಾಡ್ಕೊಂಡು... ಏನಾಯ್ತೋ ಮರಿ....''?

ಆಪ್ತ ಮಿತ್ರ ಮಾಧುನ ಭುಜದ ಸುತ್ತ ಕೈ ಹಾಕಿ ಅನುಕಂಪದಿಂದ ಕೇಳಿದ ಆತ್ಮೀಯ ಗೆಳೆಯ ಶಂಕ್ರು.

''ಏನಿಲ್ಲ ಕಣೋ... ಯಾಕೋ ಬೇಜಾರು ಒಟ್ಟಿನಲ್ಲಿ ಅಭಿಮಾನ, ಆತ್ಮಾಭಿಮಾನ ಇರಬಾರದು ಕಣೋ... ಅಂತಹವರೇ ಪರಮ ಸುಖಿಗಳು.'' ವೈರಾಗ್ಯ ಭಾವದಿಂದ ನುಡಿದಿದ್ದ ಚಡ್ಡಿ ದೋಸ್ತ್.

''ಏನೋ ಇದು? ಆತ್ಮ, ಅಭಿಮಾನ ಅಂತ ಏನೇನೋ ಒಟಗುಟ್ತಾ ಇರೋದು ನೋಡಿದ್ರೆ ಯಾಕೋ ಭಯ ಆಗ್ತಿದೆ ಮಹಾರಾಯಾ... ಯಾವಾಗ್ಲೂ ಖುಷಿಯಾಗಿ ಸಿನಿಮಾ ಹಾಡು ಶಿಳ್ಳೆ ಹಾಕ್ಕೊಂಡು, ಫಿಲ್ಮ್ ಹೀರೋ ಥರಾ ಡ್ರೆಸ್ ಮಾಡ್ಕೊಂಡು, ಹುಡುಗೀರ್ನ ಚುಡಾಯಿಸ್ಕೊಂಡು ಓಡಾಡ್ಕೊಂಡಿದ್ದವ್ನು... ಇದೇನೋ ಇದ್ದಕ್ಕಿದ್ದಂತೆ tragic hero ಥರಾ ಏನೇನೋ ಬಡಬಡಿಸ್ತಾ ಇದೀಯಾ? ಯಾವ್ದಾದ್ರೂ ಹುಡುಗಿ ಕೈ ಕೊಟ್ಟಳೇನೋ ಈ ರೋಮಿಯೋಗೆ?''

''ಸದಾಶಿವಂಗೆ ಅದೇ ಧ್ಯಾನ ಅಂತ ಸಿನಿಮಾ, ಹುಡುಗೀರು ಬಿಟ್ರೆ ಪ್ರಪಂಚದಲ್ಲಿ ನಿನಗೆ ಬೇರೆ ಇನ್ನೇನೂ ಕಾಣೋದೇ ಇಲ್ವೇನೋ ಶಂಕ್ರು? ಎಷ್ಟು ಅನ್ಯಾಯ ನಡೀತಾ ಇದೆ. ನಮ್ಮ ನೆಲದಲ್ಲೇ ನಮಗೆ ಹೀಗೆ ಅನ್ಯಾಯ ಆಗ್ತಾ ಇದ್ರೆ ಅವಮಾನದಿಂದ ತಲೆ ತಗ್ಗಿಸೋ ಅಂತಹ ಪರಿಸ್ಥಿತಿ... ಇದನ್ನೆಲ್ಲಾ ಹ್ಯಾಗೋ ಸಹಿಸೋಕ್ಕಾಗತ್ತೆ?''

ಆಗಲೇ ಮಾಧುವಿನ ದನಿ ಗದ್ಗದಿತವಾಗತೊಡಗಿತ್ತು. ''ನಮ್ಮ ನೆಲದಲ್ಲೇ ಅವಮಾನ... ಅನ್ಯಾಯ... ಏನೋ ಇದೆಲ್ಲಾ? ಯಾಕೆ, ನಿಮ್ಮ ಮನೇಲಿ ಬಾಡಿಗೆಗಿರವ್ರು, ಬಿಡಲ್ಲ ಅಂತ ತರಕಾರು ಮಾಡ್ತಿದಾರೇನೋ?'' ತನಗೆ ತೋಚಿದ್ದನ್ನ ಪಟಪಟನೆ ಹೇಳಿದ ಮಿತ್ರ.

''ನೀ ಹೇಳ್ತಿರೋ reasons ಎಲ್ಲಾ ಕೇಳ್ತಾ ಇದ್ರೆ, ನೀನೊಬ್ಬ ಮಹಾಸ್ವಾರ್ಥಿ ಅಂತಾನೇ ಸಾಬೀತಾಗತ್ತೆ ನೋಡು ಶಂಕ್ರು. ಅದಕ್ಕಲ್ಲಾ ಕಣೊ ಬೇಜಾರಾಗಿರೋದು.''

''ಮತ್ತೆ?''

''ಇವತ್ತು ಬೆಳಿಗ್ಗೆ ಜಯನಗರಕ್ಕೆ ಹೋಗ್ಬೇಕಿತ್ತು. ಎಲ್ಲಾ ಬಸ್‌ಗಳೂ ಈಗಲೋ, ಆಗಲೋ ಡೆಲಿವರಿ ಆಗೋ ತರಹ ತುಂಬಿ ತುಳುಕಾಡ್ತಿದ್ದು ನೋಡಿ, ದುಡ್ಡು ಖರ್ಚಾದ್ರೂ ಪರವಾಗಿಲ್ಲ ಆಟೋದಲ್ಲೇ ಹೋದ್ರಾಯ್ತು ಅಂತ ತೀರ್ಮಾನಿಸಿ ಆಟೋದವನನ್ನ, ''ಏನಪ್ಪ, ಜಯನಗರಕ್ಕೆ ಬರ್ತೀಯಾ'' ಅಂತ ಕೇಳಿದೆ. ಅದಕ್ಕೆ ಅವನು ''ನಾನು ಜಯನಗರಕ್ಕೆ ಬರಲ್ಲ. ರಾಜಾಜಿನಗರಕ್ಕೆ ಹೋಗ್ತಾ ಇದೀನಿ. ನನ್ನ direction ನಲ್ಲಿ ಬರೋದಾದ್ರೆ ಕೂತ್ಕೊಳ್ಳಿ ಅಂದ. ಅದಕ್ಕೆ ಈ ವೇದಾಂತ.''

''ತಲೆಹರಟ್ಬೇಡ... ಸರ್ಯಾಗಿ ಕೇಳು, ಅಷ್ಟಕ್ಕೂ ಅವನು ಹಾಗೆ ಹೇಳಿದ್ರೆ ನನಗೆ ಏನೂ ಅನ್ನಿಸ್ತಾ ಇರ್ಲಿಲ್ವೋ... ಆದ್ರೆ...''

''ಆದ್ರೆ...? ಏನಂದ...?''

ಏನಂದಾ ಗೊತ್ತಾ? ''ನೀಂಗಳ್ ಎನ್ನ ಸೊಲ್ರೆ ಸಾರ್? ಎನಕ್ ಕನ್ನಡಂ ತೆರೆಯಾದು. ತಮಿಳಲೆ ಸೊಲ್ಲುಂಗೋ'' ಅಂದ ಕಣೊ. ಕನ್ನಡಮ್ಮನ ನೆಲದಲ್ಲಿ, ಆಕೆಗೇ ಹೀಗೆ ಅವಮಾನ ಅಂದ್ರೆ ಹ್ಯಾಗೋ ಸಹಿಸೋದು?'' ಕಣ್ಣೊರೆಸಿಕೊಂಡ ಮಾಧು. ''ಅಯ್ಯೋ ಮಂಕೇ, ಇಷ್ಟೇನಾ ನಡೆದಿದ್ದು? ಆದ್ರೂ ನಿನ್ನ ಪುಣ್ಯ ಚೆನ್ನಾಗಿದೆ ಕಣಯ್ಯ. ಕನ್ನಡ ಅರ್ಥ ಆಗಲ್ಲ ತಮಿಳ್ನಲ್ಲಿ ಹೇಳಿ ಅಂದ. ಅದೇ ಅದೃಷ್ಟ ಅಂತ ಸಮಾಧಾನ ಮಾಡ್ಕೊ''

''ಏನೋ ನಿನ್ನ ಮಾತಿನ ಅರ್ಥ...?''

ಮಾಧುವಿನ B.P. ಏರುತ್ತಿತ್ತು.

''ಇನ್ನೇನೋ ಮತ್ತೆ? ಏನ್ಸಾರ್, ಕನ್ನಡ ನಾಡಿನಲ್ಲಿದ್ಕೊಂಡು ಕನ್ನಡ ಮಾತಾಡ್ತೀರಲ್ಲಾ? ನಾಚಿಕೆ ಆಗ್ಬೇಕು. ತಮಿಳಲ್ಲಿ ಮಾತಾಡಕ್ಕೆ ಆಗಲ್ವಾ?'' ಅಂತ ಕಪಾಳಮೋಕ್ಷ ಮಾಡಲಿಲ್ವಲ್ಲಾ ಆ ಮಹಾನುಭಾವ... ಅದಕ್ಕೆ ನಿನ್ನ ಪುಣ್ಯ ಅಂದೆ.

''ತೀರಾ ನಾಚಿಕೆಗೇಡು. ಎಲ್ರೂ ತಲೆ ತಗ್ಗಿಸ್ಬೇಕು'' ''ಯಾಕಪ್ಪಾ ತಲೆ ತಗ್ಗಿಸ್ಬೇಕು? ಇಲ್ನೋಡು ಇಲ್ಲೇ ಇರೋದು ತಮಾಷೆ. ಕರ್ನಾಟಕದ ಜನತೆ ಬೆಂಗಳೂರಲ್ಲಿರವ್ರು ತಮಿಳು ಮಾತಾಡ್ಬೇಕು. ಬಳ್ಳಾರಿಯವರು ತೆಲುಗಿನಲ್ಲಿ ಮಾತಾಡ್ಬೇಕು. ಇನ್ನು ಬೆಳಗಾಂ ಅಂತೂ ಸರಿಯೇ. ಮರಾಠಿ ಗೊತ್ತಿಲ್ಲದಿದ್ರೂ tution ಹೇಳಿಸಿಕೊಂಡಾದ್ರೂ ಮರಾಠಿಲೇ ಮಾತಾಡ್ಬೇಕು. ಕನ್ನಡ ಏನಿದ್ರೂ ಪಿಸುದನಿಯಲ್ಲಿ ಅಷ್ಟೆ. 'ಕನ್ನಡ ರಾಜ್ಯೋತ್ಸವ' ಅಂಜುತ್ತಾ, ಅಳುಕುತ್ತಾ ಆಚರಿಸಬೇಕು. ಆಚರಿಸದಿದ್ದರಂತೂ ಅಲ್ಲಿಯವರಿಗೆ (ಯಾರಿಗೆ ಎನ್ನುವುದು ಬಿಡಿಸಿ ಹೇಳಬೇಕಿಲ್ಲ) ಮೃಷ್ಟಾನ್ನ ಭೋಜನ ಸವಿದ ಸಂತಸ ನಗುತ್ತಾ ಹೇಳಿದ ಶಂಕ್ರು. ''ಲೋ ಶಂಕ್ರು ಏನೇನೋ ಹೇಳಿ ನನ್ನ ಉರೀತೀರೋ ಗಾಯಕ್ಕೆ ಉಪ್ಪು ಎರಚಬೇಡ ನೋಡು, ನನಗೆ ಇದನ್ನೆಲ್ಲಾ ನೋಡಕ್ಕಾಗಲ್ಲ, ಸಹಿಸಕ್ಕಾಗಲ್ಲ.

ನೀನಂತೂ ಸರಿ ಹಣೆ ಮೇಲೆ ರೈಲು ಕಂಬಿ ಎಳ್ಕೊಂಡು 'ಅಹಂ ಬ್ರಹ್ಮಾಸ್ಮಿ' ಆತ್ಮ, ಪರಮಾತ್ಮ ಒಂದೇ ಅಂತೆಲ್ಲಾ ಹೇಳವ್ರ ಗುಂಪಿಗೆ ಸೇರಿದೋನು. ನಿನಗೆ ಹ್ಯಾಗೋ ಅಭಿಮಾನ ಬರಕ್ಕೆ ಸಾಧ್ಯ?'' ಆಗಲೇ ಮಾಧುವಿನ ದನಿ ಆರೋಹಣದ ಹಾದಿ ಹಿಡಿದಿತ್ತು.

''ಏನಾಯ್ತೋ ನಿನಗೆ ಇದ್ದಕ್ಕಿದ್ದಂತೆ... ಏನೋ ಪಾಪ ಲಂಗೋಟಿ ಗೆಳೆಯ ಅಂತ ಸಮಾಧಾನ ಮಾಡಕ್ಕೆ ಹೋದ್ರೆ, ನಮ್ಮ ಶಂಕರಾಚಾರ್ಯರನ್ನೇ ಹಂಗಿಸ್ತೀಯೇನೋ? ಎಷ್ಟು ಧೈರ್ಯ ನಿನಗೆ? ನಿಮ್ಮವ್ರೇನು ಮಹಾ? ನಿಮ್ಮ ಮಧ್ವಾಚಾರ್ಯರು ಆತ್ಮ, ಪರಮಾತ್ಮ ಬೇರೆ ಅಂತ ಹೇಳೋಕ್ಕೆ ಕೊನೆ ಗಳಿಗೇಲಿ ಎರಡು ಬೆರಳು ಎತ್ತಿದ್ದಕ್ಕೆ ಏನರ್ಥ ಕೊಡ್ತಾರೆ ಗೊತ್ತಾ?''

''ಏನೋ ಅದು?''

''ಮೊದಲನೇದು ಯಾವತ್ತೂ ಕಾಫಿ ಕುಡಿಯೋದು ಬಿಡ್ಬೇಡಿ. ಎರಡನೇದು ಎಲ್ಲೇ ಹೋದ್ರೂ ಉಡುಪಿ ಹೋಟೆಲ್ ಶುರು ಮಾಡಿ ಅಂತ. ಇನ್ನೂ ಒಂದು ಅರ್ಥಾನೂ ಕೊಡತ್ತೆ. ಅದು ಹೇಳಿದ್ರೆ ನೀನು ನನ್ನ ಕೊಂದೇ ಬಿಡ್ತೀಯಾ. ಇರ್‍ಲಿಬಿಡು. 'ಶಾಂತಂ... ಪಾಪಂ... ದೊಡ್ಡವರ ವಿಷಯ ಹಾಗೆಲ್ಲಾ ಅನ್ನಬಾರ್ದಾಗಿತ್ತು ಮರ್‍ತುಬಿಡೋಣ.''

''ಹ್ಯಾಗೋ ಮರೆಯೋದು? ನಮ್ಮ ಗುರುಗಳನ್ನು ಹಾಗೆ ನಿಂದೆ ಮಾಡ್ತಾ ಇದ್ರೆ ನಾನು ಬಾಯಿ ಮುಚ್ಚಿಕೊಂಡು ಮಖೇಡಿ ಥರಾ ಕೂತಿರು ಅಂತಿಯೇನೋ?''

''ನೀನು ಮಾತ್ರಾ ರೈಲು ಕಂಬಿ ಅಂತ ಕೆಣಕ್ತೀಯಲ್ಲಾ? ನೀವುಗಳು ಹಣೆ ಮೇಲೆ ಪೋಸ್ಟಾಫೀಸಿನ ಸೀಲ್ ಹಾಕ್ಕೊಂಡು, ಸ್ವಾಮಿಗಳ ಹತ್ರ ಬರೆ ಹಾಕಿಸ್ಕೊಂಡು, ಮಾಡಿರೋ ಪಾಪ ಎಲ್ಲಾ ಭಸ್ಮ ಆಗತ್ತೆ ಅಂದ್ಕೊತೀರಲ್ಲ... ಇದ್ಯಾವ ದೇವರಿಗೆ ಪ್ರೀತೀನೋ...'' ಅಂತೆಲ್ಲಾ ಹಾರಾಡಿದ.

ಇವರಿಬ್ಬರ ಕಾದಾಟ, ಅರಚಾಟ, ತಾರಕಸ್ಥಾಯಿಗೇರುತ್ತಾ, ಪರಿಸ್ಥಿತಿ ವಿಕೋಪಕ್ಕಿಟ್ಟುಕೊಳ್ಳುವಷ್ಟರಲ್ಲಿ

''ಏನಪ್ಪಾ ಇದಲ್ಲಾ... ಎನ್ನ ಆಚಿ...'' ಎನ್ನುತ್ತಾ ಆಚೆ ಮನೆಯಿಂದ ಹೊರಬಂದರು ಆಂಡಾಳಮ್ಮ.

ಮತ್ತೆ ತಮ್ಮ ಡಯಲಾಗ್‌ಗಳನ್ನು ರಿವರ್ಸ್ ಆಗಿ replay ಮಾಡುತ್ತಾ ಹೋದಂತೆ, ಆದ ಅನರ್ಥದ ಅನುಭವ ವೇದ್ಯವಾಗಿ ''ತಾಯೇ... ಭುವನೇಶ್ವರಿ...'' ಎಂದು ಇಬ್ಬರೂ ಒಮ್ಮೆಲೇ ಉದ್ಗರಿಸಿದಾಗ,

''ನಾನ್‌ದಾ ಭುವನೇಶ್ವರಿ'' ಎಂದು ನಾಚುತ್ತಾ ನಸುನಗುತ್ತಾ ನುಡಿದಿದ್ದಳು ಆಂಡಾಳಮ್ಮನ ಸುಪುತ್ರಿ ಭುವನೇಶ್ವರಿ!

ಸಂಪಾದಕರಿಗೆ...

– ಪ್ರಕಾಶ್

ಭಾನುವಾರ ಬೆಳಿಗ್ಗೆ ಕೋಶೀಸ್‌ಗೆ ಹೋಗಿದ್ದೆ. ಅಲ್ಲಿ ಕಾಫಿ ಕುಡಿದು, ಕಾಲೇಜ್ ದಿನಗಳ ನಾಸ್ಟಾಲ್ಜಿಯ ಮೆಲುಕು ಹಾಕುವುದು ಬಹಳ ರೂಢಿ ನನಗೆ. ಸರಿಯಾಗಿ ಒಂಭತ್ತು ಗಂಟೆಗೆ ಬಾಗಿಲು ತೆಗೀತಾರೆ! ಹೊರಗೆ ಠಳಾಯಿಸುತ್ತಿರುವ ಭಕ್ತರು, ನಿಧಾನವಾಗಿ ಒಳ ಸೇರುತ್ತಾರೆ. ಕೆಲವರು ರೆಗ್ಯುಲರ್ಸ್ ಅಂತೂ, ತಮ್ಮ ತಮ್ಮ ಟೇಬಲ್‌ಗಳಿಗೇ (ನಿಧಾನವಾಗಿ) ಧಾವಿಸುತ್ತಾರೆ! ಅಂದು, ಕಾಫಿ ಕುಡಿದು ಬಿಲ್‌ಗಾಗಿ ಕಾಯುತ್ತಿದ್ದೆ. ನನ್ನ ಪಕ್ಕದ ಟೇಬಲ್‌ನಲ್ಲಿ ಕೂತಿದ್ದ ಒಬ್ಬ ಆಸಾಮಿ ಬಿಲ್ ತೆತ್ತು ಹೊರಟ. ನಾನೂ ಎದ್ದು ಹೊರಡಲುದ್ಯುಕ್ತನಾದೆ. ಅವನ ಟೇಬಲ್ ಮೇಲೆ ಒಂದು ಕಾಗದ ಕಂಡು ಬಂತು. ತಕ್ಷಣ ಅದನ್ನ ತಗೊಂಡು ಹೊರಕ್ಕೆ ಓಡಿದೆ! ಅವನಿಗೆ ವಾಪಸ್ಸು ಕೊಟ್ಟು, ಅಂದಿನ ಗುಡ್ ಟರ್ನ್ ಮುಗಿಸೋಣ ಅಂತ. ಆದರೆ ಆ ವ್ಯಕ್ತಿ ಎಲ್ಲೂ ಕಂಡುಬರಲಿಲ್ಲ! ಅಲ್ಲೇ ನಿಂತಿದ್ದ ಖಾಕೀಧಾರೀ ಕಾರ್ಕಿಂಗ್ ನೌಕರನನ್ನ ಕೇಳಿದೆ. ಅವನು "Gone in scooter Sir!' ಅಂತ ಹೇಳಿದ. ಅವನ ಇಂಗ್ಲಿಷ್ ಪಾಂಡಿತ್ಯ ಕಂಡು ನಗು ಬಂತು! ಹೋಗಲಿ, ಈ ಪೇಪರ್‌ನಲ್ಲಿ ಏನಿದೆ ಅಂತ ನೋಡಿದೆ. ಯಾರ ಹೆಸರು, ಕುಲ, ಗೋತ್ರ ಇಲ್ಲ. ಅದರಲ್ಲಿದ್ದುದನ್ನ ಯಾರಿಗೆ ಕಳಿಸಿ ಈ ಋಣಾನುಬಂಧ ಕಳೆದುಕೊಳ್ಳಲಿ ಅಂತ ಯೋಚಿಸಿ, ಅಪರಂಜಿ ಸಂಪಾದಕರಿಗೆ ಪೋಸ್ಟಿಸಿದೆ!

''ನಾವು ಓದಬಯಸುವ ಪುಸ್ತಕಗಳು!''

1. ''ಏಳಿ! ಎಚ್ಚೆತ್ತು ಮುಂದೆ ಸಾಗಿ!''
- ಶ್ರೀ ದೇವೇಗೌಡ

2. 'ಧರ್ಮದಿಂದ ದೇಶಕ್ಕೆ ಹಾನಿ'
- ಬಾಲ್ ಠಾಕರೆ

3. ಭಿನ್ನರು; ನಿಷ್ಠರು; ಒಂದು ವಿಮರ್ಶೆ
- ಶ್ರೀ ಪಟೇಲ್

4. 'ರಾಜಕೀಯ ಮತ್ತು ಲಿಂಜ್ ನಿರ್ಮೂಲನ'
- ಲಲ್ಲೂ ಯಾದವ್

5. 'ನಿವೃತ್ತನಾದ ಬಳಿಕ' (ಆತ್ಮಕಥೆ)
- ಶ್ರೀ ವೀರಪ್ಪನ್

6. ವಿಶಾಲ ಹೃದಯ (ಕಾದಂಬರಿ)

- ಜಯಲಲಿತ

7. ಸತ್ಯದೊಡನೆ ನನ್ನ ಪ್ರಯೋಗಗಳು

- ಕ್ಲಿಂಟನ್

8. 'ನಿರ್ಲಿಪ್ತತೆ'

- ಶ್ರೀ ವಾಜಪೇಯೀ

9. ಸಸ್ಯಾಹಾರದ ಪಥ್ಯಗಳು

- ಸಲ್ಮಾನ್ ಖಾನ್

10. ಬಡತನದ ಬೇಗೆ

- ಬಿಲ್ ಗೇಟ್ಸ್

★★★



"ಅಂದಹಾಗೆ ನಿಮ್ಮ ಅತ್ತೆಯ ಹೊಟ್ಟೆ ಉಬ್ಬರ ಈಗ ಹೇಗಿದೆ?"

ಜೈ ಎನ್ನಲೆ ಮಿನಿಗೆ?

ಬಾಲ್ಯದಲ್ಲಿ ಸೋತೆ
ಭಾರತದ ಜೈ-
ಮಿನಿ ಗೆ
ಶಾಲೆಯಲಿ ಸೋತೆ
ಷಟ್ಪದಿಯ ಭಾ-
ಮಿನಿ ಗೆ
ಹರಯದಲಿ ಸೋತೆ
ಕಣ್ಸೆಳದ ಕಾ-
ಮಿನಿ ಗೆ
ವ್ಯವಹಾರದಲಿ ಸೋತೆ
ಚದುರೆ ಸಾದಾ -
ಮಿನಿ ಗೆ
ಈಗ ಸೋತೆ
ಸುಂದರ ಕವನ
ಮಿನಿ ಗೆ
ಜೈ ಎನ್ನಲೇ ಹೀಗೆ
ಸದಾ ಈವರೆಗೆ
ನನ್ನ ಸೋಲಿಸಿದ
ಮಿನಿ ಗೆ?

– ಎನ್ ಪ್ರಕಾಶ್

ಅಪರಂಜಿ

ಕಳೆದ ಹದಿನೈದು ವರುಷಗಳಿಂದ ಉತ್ತಮ ಅಭಿರುಚಿಯ, ಪ್ರಬುದ್ಧ ವಿನೋದ ಸಾಹಿತ್ಯವನ್ನು ನಾಡಿನ ಹಾಸ್ಯಪ್ರೇಮಿಗಳಿಗೆ ನೀಡುತ್ತಾ ಬಂದಿರುವ ಮಾಸಿಕ ಅಪರಂಜಿ. ಇಪ್ಪತ್ತೈದು ವರ್ಷಗಳ ಕಾಲ ಕನ್ನಡ ಜನತೆಯನ್ನು ರಂಜಿಸಿದ ಕೊರವಂಜಿ ನಡೆದ ಹಾದಿಯಲ್ಲಿ ನಡೆಯುತ್ತಾ ಬಂದಿರುವ ಈ ಪತ್ರಿಕೆಗೆ ಒಂದು ಸುಭದ್ರವಾದ ಆರ್ಥಿಕ ಬುನಾದಿಯನ್ನು ಒದಗಿಸುವ ಉದ್ದೇಶದಿಂದ ಅಪರಂಜಿಗೆ ಹತ್ತು ವರ್ಷದ ಸದಸ್ಯತ್ವವನ್ನು ನೀಡುವಂತೆ ಕನ್ನಡ ಹಾಸ್ಯಾಭಿಮಾನಿಗಳನ್ನು ಕೋರುತ್ತಿದ್ದೇವೆ. ಚಂದಾ ವಿವರಗಳು ಇಂತಿವೆ:

ಹತ್ತು ವರ್ಷದ ಚಂದಾ: 500/- ರೂ.ಗಳು

ವಾರ್ಷಿಕ ಚಂದಾ: 60/- ರೂ.ಗಳು

ಹತ್ತು ವರ್ಷದ ಚಂದಾ ಹಣವನ್ನು 250/- ರೂ.ಗಳ ಎರಡು ಕಂತುಗಳಲ್ಲಿ ಕೊಡುವ ಸೌಲಭ್ಯವಿದೆ. ಚೆಕ್ಕುಗಳನ್ನು ''ಅಪರಂಜಿ'' ಹೆಸರಿಗೆ ನಮೂದಿಸಬಹುದು. ಚಂದಾದಾರರಿಗೆ, ಪ್ರತಿ ತಿಂಗಳ ಸಂಚಿಕೆಯೇ ಅಲ್ಲದೇ ಪ್ರತಿವರ್ಷ ಡಿಸೆಂಬರಿನಲ್ಲಿ ನಡೆಯುವ ಹಾಸ್ಯೋತ್ಸವಕ್ಕೆ ಆದರದ ಆಹ್ವಾನ ಹಾಗೂ ಆ ಸಂದರ್ಭದಲ್ಲಿ ಹೊರಬರುವ ವಿಶೇಷ ಸಂಚಿಕೆ ಉಚಿತವಾಗಿ ದೊರೆಯುತ್ತದೆ. ನಿಮ್ಮ ಸದಸ್ಯತ್ವವನ್ನು ಇದಿರು ನೋಡುವ,

ತಮ್ಮ ವಿಶ್ವಾಸಿ,

ಶಿವಕುಮಾರ್, ಸಂಪಾದಕ

ಸಂಪಾದಕರು, ಅಪರಂಜಿ ಮಾಸಪತ್ರಿಕೆ,

ಮಾನ್ಯರೇ,

ಈ ಮೂಲಕ 'ಅಪರಂಜಿ''ಗೆ ನನ್ನ ಚಂದಾ ಹಣ (ಹತ್ತು ವರ್ಷದ ಚಂದಾ/ವಾರ್ಷಿಕ ಚಂದಾ)ವನ್ನು ನೀಡುತ್ತಿದ್ದೇನೆ.

ನನ್ನ ವಿಳಾಸ ಹೀಗಿದೆ:

....

....

....

....

ಇಂತೀ ತಮ್ಮ ವಿಶ್ವಾಸಿ,

(ಸಹಿ)



ಶ್ರೀಮತಿ ಶಾಂತಾ ಮತ್ತು ಶ್ರೀ ಸಿ. ಆರ್. ರಘು
ಇವರ ಸವಿನೆನಪಿಗೆ

ಪೂರ್ಣಿಮಾ ರಘು ಗೌಡ – ಸುಧೀರ್‌ಗೌಡ
ಶ್ರೀಹರಿ ಕಡಾಂಬಿ.

Printed by V.R. NATH for the Publisher M. SHIVAKUMAR, Published and owned by M. SHIVA KUMAR, 36, 6th Main Road, Malleswaram Bangalore - 560 003 Printed at RAVI GRAPHICS, 62, 4th Cross, SSI Area, Rajajinagar, Bangalore 560 010
Editor : M. SHIVAKUMAR